ಶ್ರೀಮತ್ಸುಶೀಲೇಂದ್ರವಿಜಯ

(ಕನ್ನಡಾನುವಾದ)

ಸಂಪಾದಕರು

ವಿದ್ವಾನ್ ಪಿ.ವಿ. ಹರಿನಾಥ್

ವಿದ್ವಾನ್ ಎನ್.ಆರ್. ದ್ವಾರಕಾನಾಥಾಚಾರ್ಯ

ಪ್ರಕಾಶಕರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಶ್ರೀರಘುನಂದನ ರಾಘವೇಂದ್ರ ಮಾಲಾ - ೨

॥ ಶ್ರೀಮೂಲರಾಮೋ ವಿಜಯತೇ ॥ ॥ ಶ್ರೀಮೂಲರಾಮೋ ವಿಜಯತೇ ॥

ಶ್ರೀಮತ್ಸುಶೀಲೇಂದ್ರವಿಜಯ

ಪ್ರಧಾನ ಸಂಪಾದಕರು
ರಾಜಾ. ಎಸ್. ರಾಜಗೋಪಾಲಾಚಾರ್ಯ

ಸಂಪಾದಕರು
ಎನ್. ಆರ್. ದ್ವಾರಕಾನಾಥಾಚಾರ್ಯ
ಪಿ. ವಿ. ಹರಿನಾಥ್
ಶ್ರೀಗುರುಸಾರ್ವಭೌಮ ವಿದ್ಯಾಪೀಠ, ಮಂತ್ರಾಲಯ

ಮೂಲ
ಶ್ರೀ ನಂಜುಂಡಸ್ವಾಮಿ

ಕನ್ನಡಾನುವಾದ
ಶ್ರೀ ಸಿ. ಆರ್. ಶ್ರೀಪಾದರಾವ್

ಪ್ರಕಾಶಕರು
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

Rarest Archiver

ಗ್ರಂಥನಾಮ : **ಶ್ರೀಸುಶೀಲೇಂದ್ರವಿಜಯ**
SRI SUSHEELENDRAVIJAYA

ಗ್ರಂಥಕಾರರು : ಶ್ರೀ ನಂಜುಂಡಸ್ವಾಮಿ

ಕನ್ನಡಾನುವಾದ : ಶ್ರೀ ಸಿ.ಆರ್. ಶ್ರೀಪಾದರಾವ್

ಪ್ರಥಮ ಮುದ್ರಣ : ೨೦೦೩ (ಮೂಲ ಮಾತ್ರ)

ದ್ವಿತೀಯ ಮುದ್ರಣ : ೨೦೦೪ (ಕನ್ನಡಾನುವಾದ ಸಹಿತ)

ಹಕ್ಕು : **ಶ್ರೀರಾಘವೇಂದ್ರಸ್ವಾಮಿಗಳವರ ಮಠ**
ಮಂತ್ರಾಲಯ

ಪ್ರತಿಗಳು : ೧೦೦೦

ಪುಟ : xiv + 42

ಅಕ್ಷರ ಜೋಡಣೆ : **ಶ್ರೀಗುರುಸಾರ್ವಭೌಮ ವಿದ್ಯುನ್ಮಾನ ಮುದ್ರಣಾಲಯ**
ನಂ. ೧೯/೨೦, 'ಶ್ರೀಮೂಲರಾಮ', ೨ನೇ ಅಡ್ಡರಸ್ತೆ,
೫ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೦೮೦-೨೬೬೦೬೦೮೦

ಮುದ್ರಕರು : **ಶ್ರೀವರ್ಣ ಪ್ರಿಂಟರ್ಸ್**
ಚಾಮರಾಜಪೇಟೆ, ಬೆಂಗಳೂರು

Rarest Archiver

ಗ್ರಂಥ ಸಮರ್ಪಣೆ

ಶ್ರೀಹಂಸನಾಮಕ ಪರಮಾತ್ಮ ಪ್ರವರ್ತಿತವಾದ
ಪರಂಪರೆಯಲ್ಲಿ ಬಂದಿರುವ ಸರ್ವಜ್ಞರಾದ
ಶ್ರೀಪಾವನಪವನಾಂಶಸಂಭೂತರಾದ
ಜಗದ್ಗುರು ಶ್ರೀಮಧ್ವಾಚಾರ್ಯರ
ಮೂಲಮಹಾಸಂಸ್ಥಾನಾಧೀಶ್ವರರಾದ ವೇದಾಂತ ಸಾಮ್ರಾಜ್ಯ
ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ
ಶ್ರೀಜಿತಾಮಿತ್ರತೀರ್ಥರ ಕರಸಂಜಾತರಾದ
ಶ್ರೀರಘುನಂದನತೀರ್ಥರ
ಹಾಗೂ ಕಲಿಯುಗದ ಕಾಮಧೇನು ಎಂದು ಪ್ರಸಿದ್ಧರಾದ
ಶ್ರೀರಾಘವೇಂದ್ರಗುರುಸಾರ್ವಭೌಮರ ಚರಣಾರವಿಂದಗಳಲ್ಲಿ
ಈ ಗ್ರಂಥವನ್ನು ಶ್ರೀರಘುನಂದನತೀರ್ಥರ ೫೦೦ ನೇ ವರ್ಷದ
ಆರಾಧನಾ ಸಂದರ್ಭದಲ್ಲಿ "ಶತಗ್ರಂಥ ಯೋಜನೆ"ಯ ಅಡಿಯಲ್ಲಿ
ಭಕ್ತಿಶ್ರದ್ಧಾದರಪೂರ್ವಕವಾಗಿ ಸಮರ್ಪಿಸಲಾಗಿದೆ.

ಇತಿ

ಸಂಪಾದಕಮಂಡಲಿ

Rarest Archiver

ಆಶೀರ್ವಚನ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣಪಾರಾವಾರಪಾರಂಗತ
ಸರ್ವತಂತ್ರಸ್ವತಂತ್ರ ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ
ಶ್ರೀಮನ್ಮೂಲರಘುಪತಿವೇದವ್ಯಾಸದೇವದಿವ್ಯಶ್ರೀಪಾದಪದ್ಮಾರಾಧಕ ಜಗದ್ಗುರು
ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನಾಧೀಶ್ವರರಾದ ಶ್ರೀರಾಘವೇಂದ್ರಸ್ವಾಮಿಗಳವರ
ಮಠದ ವೇದಾಂತಸಾಮ್ರಾಜ್ಯದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ
ಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ
ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರಕರಾದ

ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರು

ಮಾಡುವ ನಾರಾಯಣ ಸ್ಮರಣೆಗಳು

ಪ್ರಕೃತ, ನಮ್ಮ ಪೂರ್ವೀಕರಾದ ಶ್ರೀಮನ್ಮಧ್ವಾಚಾರ್ಯರಿಂದ ಹರಿದು ಬಂದ ಈ ಸತ್ಸಂಪ್ರದಾಯ ಪರಂಪರೆಯಲ್ಲಿ ಅನೇಕ ಗ್ರಂಥಕಾರರು ಪೀಠಾಧಿಪತಿಗಳಾಗಿ ಮಧ್ವಸಿದ್ಧಾಂತ ಸೇವೆಯನ್ನು ಮಾಡಿರುತ್ತಾರೆ. ಅಂತೆಲೇ ನಮ್ಮ ಮಹಾಸಂಸ್ಥಾನವನ್ನು ವಿದ್ಯಾಸಿಂಹಾಸನವನ್ನು ಕರೆಯಲಾಗಿದೆ. ಇಂತಹ ವಿದ್ಯಾಮಠದ ಪರಂಪರೆಯಲ್ಲಿ ಆಚಾರ್ಯರಿಂದ ಹನ್ನೆರಡನೇ ಪೀಠಾಧೀಶ್ವರರಾಗಿ ಮೆರೆದು, ಬ್ರಹ್ಮಕರಾರ್ಚಿತವಾದ ಶ್ರೀಮೂಲರಾಮದೇವರನ್ನು ಪುನಃ ಮಹಾಸಂಸ್ಥಾನಕ್ಕೆ ತಂದುಕೊಟ್ಟು ಅಜರಾಮರರಾದ ಶ್ರೀರಘುನಂದನತೀರ್ಥರ ೫೦೦ನೇ ವರ್ಷದ ಆರಾಧನೆ ಹಾಗೂ ಶ್ರೀರಾಘವೇಂದ್ರಗುರುಸಾರ್ವಭೌಮರ ೩೩೩ನೇ ಆರಾಧನೆಯ ಸವಿನೆನಪಿಗಾಗಿ ನಮ್ಮ ಪರಮಗುರುಗಳಾದ ಶ್ರೀಸುಶೀಲೇಂದ್ರತೀರ್ಥ ಶ್ರೀಪಾದಂಗಳವರ ಮೇಲೆ ರಚಿತವಾದ ಈ ಅಪೂರ್ವವಾದ ಗ್ರಂಥವನ್ನು ಶತಗ್ರಂಥ ಯೋಜನೆಯಡಿಯಲ್ಲಿ ದ್ವಿತೀಯ ಕುಸುಮವಾಗಿ ಪ್ರಕಾಶಿಸುತ್ತಿರುವುದು ನಮಗೆ ಅತೀವ ಸಂತೋಷವನ್ನುಂಟು ಮಾಡಿದೆ.

ಈ ಜ್ಞಾನಕಾರ್ಯ ನಿರಂತರವಾಗಿ ನಡೆಯುತ್ತಿರಲಿ ಹಾಗೂ ನಮ್ಮ ಪೂರ್ವೀಕರ ಅನೇಕ ಗ್ರಂಥಗಳು ಹೊರಬರುವಂತಾಗಲಿ ಎಂದು ನಮ್ಮ ಉಪಾಸ್ಯಮೂರ್ತಿಯಾದ ಮೂಲರಘುಪತಿ ವೇದವ್ಯಾಸದೇವರಲ್ಲಿ ತಥಾ ಶ್ರೀರಾಘವೇಂದ್ರಗುರುಸಾರ್ವಭೌಮರಲ್ಲಿ ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು.

Rarest Archiver

ಪ್ರಕಾಶಕರ ನುಡಿ

ಹಂಸನಾಮಕ ಪರಮಾತ್ಮನ ಭವ್ಯ ಪರಂಪರೆಯಲ್ಲಿ ವಿರಾಜಮಾನರಾದ ಜಗದ್ಗುರುಗಳೆನಿಸಿದ ಹನುಮ-ಭೀಮಾವತಾರಿಗಳಾದ ಶ್ರೀಮಧ್ವಾಚಾರ್ಯ ಪರಂಪರೆಯಲ್ಲಿ ಕಂಗೊಳಿಸಿ, ಕಲಿಯುಗದ ಕಾಮಧೇನು ಎಂದು ಪ್ರಖ್ಯಾತರಾದ ಶ್ರೀರಾಘವೇಂದ್ರ ಗುರುಸಾರ್ವಭೌಮರ ವೇದಾಂತ ದಿಗ್ವಿಜಯ ಸಿಂಹಾಸನದಲ್ಲಿ ಶ್ರೀಮದಾಚಾರ್ಯರಿಂದ ೨೬ನೇ ಪೀಠಾಧೀಶ್ವರರಾಗಿ ಮಂತ್ರಾಲಯ ಕ್ಷೇತ್ರವನ್ನು ಪರಿ ಪರಿಯಿಂದ ಅಭಿವೃದ್ಧಿಗೊಳಿಸಿದ ಮಹಾನ್ ವ್ಯಕ್ತಿ ಶ್ರೀಸುಶೀಲೇಂದ್ರತೀರ್ಥರು. ವಿದ್ಯಾಪಕ್ಷಪಾತಿಗಳಾಗಿ, ಪಂಡಿತರನ್ನು ವಿಧ ವಿಧದಿಂದ ಸಂತುಷ್ಟಗೊಳಿಸಿ, ವಿದ್ಯಾಮಠ ಎಂಬ ಹೆಸರನ್ನು ಸಾರ್ಥಕಗೊಳಿಸಿದ್ದರು. ಇವರು ೯ ಬಾರಿ ಸುಧಾಮಂಗಳವನ್ನು ಮಾಡಿದ್ದರ ದಾಖಲೆ ಶ್ರೀಮಠದಲ್ಲಿ ಕಾಣಬಹುದು. ಇವರ ಕಾಲದಲ್ಲಿಯೇ ಉಡಿಪಿ ಕ್ಷೇತ್ರದಲ್ಲಿ ಶ್ರೀರಾಘವೇಂದ್ರಸ್ವಾಮಿಗಳ ಮೃತ್ತಿಕಾ ಬೃಂದಾವನ ಪ್ರತಿಷ್ಠಾಪನೆ ನಡೆಯಿತು. ಇವರು ಅಸಾಧಾರಣ ಪಂಡಿತರಾಗಿ ಪೂರ್ವಾಶ್ರಮ-ದಲ್ಲಿಯೇ ವಿದ್ವತ್ಸಭೆಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಡೆಸುತ್ತಿದ್ದರು. ಇವರ ಪೂರ್ವಾಶ್ರಮ ಅಣ್ಣಂದಿರಾದ ಶ್ರೀಸುಕೃತೀಂದ್ರತೀರ್ಥರಿಂದ ಪರಮಹಂಸಾಶ್ರಮ-ವನ್ನು ಸ್ವೀಕರಿಸಿ ಶ್ರೀಸುಶೀಲೇಂದ್ರತೀರ್ಥರು ಎಂದು ನಾಮಕರಣವಾದ ಮೇಲೆ ವೇದಾಂತ ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾಗಿ ಪ್ರಾಚೀನಕಾಲದಿಂದಲೂ ನಡೆದು ಬರುತ್ತಿದ್ದ ಶ್ರೀಮಠದ ವಿದ್ವತ್ಸಭೆಗೆ **'ಸಮೀರ ಸಮಯ ಸಂವರ್ಧಿನೀ'** ಎಂಬುದಾಗಿ ನಾಮಕರಣ ಮಾಡಿ ವಿದ್ವತ್ಸಭೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದರು. ಇವರ ಕಾಲದಲ್ಲಿ ಮಠ-ಮಠ ಭೇದವಿಲ್ಲದೆ, ಇವರು ನಡೆಸುತ್ತಿದ್ದ ವಿದ್ವತ್ಸಭೆ-

Rarest Archiver

ಯಲ್ಲಿ ಪಂಡಿತರು ಭಾಗವಹಿಸುತ್ತಿದ್ದರು. ಆಗ ಇವರ ಸಮಕಾಲೀನರಾದ ಉತ್ತರಾದಿ ಮಠದ ಶ್ರೀಸತ್ಯಧ್ಯಾನತೀರ್ಥರು ಇವರನ್ನು ಸಂಧಿಸಿ, ಇವರ ವಿದ್ವತ್ತನ್ನು ಕಂಡು, ಆನಂದತುಂದಿಲರಾಗಿ, ತಮ್ಮ ಮಠದ ಮರ್ಯಾದೆಗಳನ್ನು ಮಾಡಿ ಉತ್ತರಾದಿ ಮಠಕ್ಕೆ ಆಹ್ವಾನವನ್ನು ಕೊಟ್ಟರು ಎಂದ ಮೇಲೆ ಇವರ ಅಗಾಧವಾದ ಪಾಂಡಿತ್ಯ ಎಂತಹವನಿಗಾದರೂ ಅರ್ಥವಾದೀತು. ಇಂತಹ ಮಹಾನ್ ಪ್ರಭುಗಳ ಮೇಲೆ ನಂಜನಗೂಡಿನ ಸ್ಮಾರ್ತರಾದ ಚಂದ್ರಶೇಖರಸ್ವಾಮಿಯವರ ಮಕ್ಕಳಾದ ನಂಜುಂಡಸ್ವಾಮಿ ಎಂಬುವರು ಗುರುಗಳ ಮೇಲೆ ೧೨೭ ಶ್ಲೋಕಗಳಿಂದ ಕೂಡಿರುವ ಪದ್ಯಗಳನ್ನು ರಚನೆ ಮಾಡಿದ್ದಾರೆ. ಇದಕ್ಕೆ ಅವರು ಅಭಿನವ ಶ್ರೀರಾಘವೇಂದ್ರ ಚರಿತೆ ಎಂದು ಹೆಸರಿಟ್ಟಿದ್ದರು. ಇದನ್ನು ಶ್ರೀಯವರ ಮುಂದೆ ಓದಿದಾಗ ಶ್ರೀಯವರು ರಾಯರು ಎಲ್ಲೋ, ನಾವೆಲ್ಲೋ ಎಂದು ಹೇಳಿ ಎಷ್ಟೋ ಪ್ರತಿಗಳನ್ನು ಕಪಿಲಾ ನದಿಗೆ ಹಾಕಿಸಿದರು. ಅದಾದ ಮೇಲೆ ೧೯೨೯ನೇ ಇಸವಿಯಲ್ಲಿ ಎಲತ್ತೂರು ಕೃಷ್ಣಾಚಾರ್ಯರಿಂದ ಪರಿಶೀಲಿಸಿ, ದಿವಾನ್ ಶ್ರೀನಿವಾಸಮೂರ್ತಾಚಾರ್ಯರಿಂದ (ಶ್ರೀಸುಯಮೀಂದ್ರತೀರ್ಥರು) ಅನುಮತಿ ಪಡೆದು ಸ್ವತಃ ಗ್ರಂಥಕಾರರೇ ಮುದ್ರಿಸಿದರು. ಇದರ ಪ್ರತಿಯು ಶ್ರೀರಾಘವೇಂದ್ರಸಾಹಿತ್ಯಪರಿಷತ್, ನಂಜನಗೂಡಿನಲ್ಲಿ ಇದ್ದು, ಅದನ್ನು ೨೦೦೦ದ ಇಸವಿಯಲ್ಲಿ ಪ್ರಕಾಶನ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಶ್ರೀಮಠವು ಅದರ ಕನ್ನಡಾನುವಾದವನ್ನು ಬೆಂಗಳೂರಿನ ಶ್ರೀ ಸಿ.ಆರ್. ಶ್ರೀಪಾದರಾವ್ ಅವರಿಂದ ಮಾಡಿಸಿ, ಪ್ರಕಟಿಸುತ್ತಿದೆ. ಈ ಗ್ರಂಥವನ್ನು ಶ್ರೀರಘುನಂದನತೀರ್ಥರ ೫೦೦ನೇ ವರ್ಷದ ಆರಾಧನಾ ಸಂದರ್ಭದಲ್ಲಿ ಪ್ರಕಾಶನಗೊಳಿಸುತ್ತಿರುವುದು ಸಂತಸ ತರುವ ಸಂಗತಿಯಾಗಿದೆ.

ಗ್ರಂಥ ಪ್ರಕಾಶನ ಮತ್ತು ಮುದ್ರಣದಲ್ಲಿ ನಮ್ಮೊಂದಿಗೆ ಸಹಕರಿಸಿದ ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಅಧ್ಯಾಪಕ ವೃಂದಕ್ಕೂ, ಅಕ್ಷರ ಜೋಡಣೆ ಮಾಡಿದ ಶ್ರೀಮತಿ ಶೈಲಜ ಶಂಕರ್ ಹಾಗೂ ಕು. ವಿಜಯಲಕ್ಷ್ಮಿ

Rarest Archiver

ಅವರಿಗೂ, ವಿಶೇಷ ಮುತುವರ್ಜಿ ವಹಿಸಿ ಪುಸ್ತಕ ಹೊರಬರಲು ಶ್ರಮಿಸಿದ ರಾಜಾ. ಎಲ್. ಸೂರೀಂದ್ರಾಚಾರ್ಯ ಅವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀವರ್ಣ ಪ್ರಿಂಟರ್ಸ್‌ನ ಸಿಬ್ಬಂದಿ ವರ್ಗದವರಿಗೂ ಶ್ರೀರಾಘವೇಂದ್ರ ಗುರುಸಾರ್ವಭೌಮರು ಸಕಲ ಸನ್ಮಂಗಳವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ.

ಮಂತ್ರಾಲಯ
೩೧-೮-೨೦೦೪
ಮಧ್ಯಾರಾಧನಾ

ಇತಿ ಸಜ್ಜನ ವಿಧೇಯ

ರಾಜಾ. ಎಸ್. ರಾಜಗೋಪಾಲಾಚಾರ್ಯ

ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ

Rarest Archiver

Rarest Archiver

ಶ್ರೀಮಧ್ವಾಚಾರ್ಯರು



Rarest Archiver

Rarest Archiver

ಶ್ರೀರಾಘವೇಂದ್ರತೀರ್ಥರು



Rarest Archiver

ಶ್ರೀಸುಶೀಲೇಂದ್ರತೀರ್ಥರು

Rarest Archiver

ಶ್ರೀಸುಶಮೀಂದ್ರತೀರ್ಥರು
ಪ್ರಸ್ತುತ ಪೀಠಾಧಿಪತಿಗಳು

Rarest Archiver

Rarest Archiver

॥ ಶ್ರೀಃ ॥

ಶ್ರೀಮತ್ಸುಶೀಲೇಂದ್ರವಿಜಯ

ಶ್ರೀವಿಶ್ವಮೂಲರಾಮಾಯ ನಮಸ್ಸೀತಾನುಯಾಯಿನೇ ।
ಪರಬ್ರಹ್ಮಸ್ವರೂಪಾಯ ಹರಯೇ ಪರಮಾತ್ಮನೇ ॥ ॥೧॥

ಶ್ರೀಕರದ್ವೈತಸಿದ್ಧಾಂತಮತಸ್ಥಾಪನತತ್ಪರಾಃ ।
ಶ್ರೀಮದಾನನ್ದತೀರ್ಥಾಖ್ಯಮಧ್ವಾಚಾರ್ಯಮತಾನುಗಾಃ ॥ ॥೨॥

ಶ್ರೀರಾಘವೇಂದ್ರವೇದಾಂತಸಿಂಹಪೀಠಪ್ರತಿಷ್ಠಿತಾಃ ।
ಸುಜ್ಞಾನೇಂದ್ರಸುಧೀರೇಂದ್ರಸುಶೀಲೇಂದ್ರಾದಯಸ್ಸ್ಮೃತಾಃ ॥ ॥೩॥

✦ ✦ ✦

ಲೋಕದೊಳು ಸಂಸಾರಬಂಧದ । ನೇಕದುಃಖಂಗಳಲಿ ತೊಳಲುವ ।
ಕಾಕುನರರಜ್ಞಾನವನು ಪರಿಹರಿಸೆ ಕರುಣದಲಿ ॥
ಶ್ರೀಕರಜ್ಞಾನವನು ಬೋಧಿಪ । ಲೋಕವಂದಿತಗುರುಯತೀಂದ್ರರ ।
ಶ್ರೀಕರಾಂಘ್ರಿಯುಗಕೆ ನಮಿಪೆನು ಭಕ್ತಿವಿನಯದಲಿ ॥ ॥೧॥

ತಾತ್ಪರ್ಯ : ಈ ಲೋಕದಲ್ಲಿ ಸಂಸಾರಬಂಧನದಿಂದ ಅನೇಕ ದುಃಖಗಳಲ್ಲಿ ತೊಳಲುವ ಪಾಪಿಗಳ ಅಜ್ಞಾನವನ್ನು ಕರುಣೆಯಿಂದ ಹೋಗಲಾಡಿಸಿ, ಒಳ್ಳೆಯ ಜ್ಞಾನವನ್ನು ಬೋಧಿಸುವ, ಲೋಕವಂದಿತರಾದ ಗುರುಗಳ ಪಾದಗಳಿಗೆ ವಿನಯ-ಭಕ್ತಿಗಳಿಂದ ನಮಸ್ಕರಿಸುತ್ತೇನೆ.

Rarest Archiver

ಆವನಾಗುರುರಾಘವೇಂದ್ರರ । ಪಾವನಾಂಘ್ರಿಯ ಸ್ಮರಿಸುವನು ಮ ।
ತ್ತಾವಗಂ ಪಠಿಸುವನು ನರಹರಿನಾಮಕೀರ್ತನೆಯ ॥
ಆವಿಮಲಮನುಜಂಗೆ ಸುರಮುನಿ । ಸೇವಿತನು ಶ್ರೀರಾಮಚಂದ್ರನು ।
ಭೂಮಿನುತಕೀರ್ತಿಯನು ಸುಖವನು ಕರುಣಿಸುವನಲ್ತೇ ॥ ॥೨॥

ತಾತ್ಪರ್ಯ : ಯಾವ ಮನುಜನು ಶ್ರೀನರಹರಿಯ ಕೀರ್ತನೆಯನ್ನು ಮತ್ತು ಶ್ರೀಗುರುರಾಘವೇಂದ್ರರ ಪಾವನವಾದ ಪಾದಗಳನ್ನು ಸ್ಮರಿಸುತ್ತಾನೆಯೋ ಆ ಸಾತ್ವಿಕ ಮನುಜನಿಗೆ ಸುರಮುನಿಗಳಿಂದ ವಂದಿತನಾದ ಶ್ರೀರಾಮಚಂದ್ರನು ಎಲ್ಲ ಸುಖಗಳನ್ನೂ ಕೀರ್ತಿಯನ್ನೂ ಕರುಣಿಸುವನು.

ಭರತಖಂಡದೊಳೆಸೆವ ಮೈಸೂ । ರರಸ ಮುಮ್ಮಡಿಕೃಷ್ಣರಾಜರ ।
ಪರಿಪರಿಯ ಸೇವೆಯನು ಕೈಕೊಂಡಧಿಕವಿಭವದಲಿ ॥
ಪರಶುರಾಮಕ್ಷೇತ್ರವೆನಿಸುವ । ಗರಳಪುರಿಯೊಳಗೊಂದು ಮಠವನು ।
ವಿರಚಿಸಿಯೆಜಸವಡೆದ ಸುಜ್ಞಾನೇಂದ್ರರನು ನಮಿಪೆಂ ॥ ॥೩॥

ತಾತ್ಪರ್ಯ : ಈ ನಮ್ಮ ಭರತಖಂಡದಲ್ಲಿ ಪ್ರಸಿದ್ಧವಾದ ಮೈಸೂರು ಸಂಸ್ಥಾನದ ಅರಸರಾದ ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರಿಂದ ಸೇವಿತರಾದ, ಪರಶುರಾಮಕ್ಷೇತ್ರವೆನಿಸಿದ ನಂಜನಗೂಡಿನಲ್ಲಿ ಶ್ರೀಮಠವನ್ನು ಸ್ಥಾಪಿಸಿ ಯಶಸ್ಸನ್ನು ಪಡೆದ ಶ್ರೀಸುಜ್ಞಾನೇಂದ್ರತೀರ್ಥರಿಗೆ ನಮಸ್ಕರಿಸುವೆನು.

ತದನು ಪೀಠವನದರಿಮೆರೆದಾ । ಬುಧವಿನುತ ಸುಕೃತೀಂದ್ರಗುರುಗಳ ।
ಪದವಿಯೊಳು ಧೀಮಾನಕೃಷ್ಣಾಚಾರ್ಯನಾಮಕರು ॥
ಸದಮಳಿನವೇದಾಂತಸಾರದ । ಸುಧೆಯ ತರ್ಕವನರಿತು ಲೌಕಿಕ ।
ವಿದಿತಕರ್ಮವ್ಯವಹರಣೆಯಲಿ ಚತುರರೆನಿಸಿದರು ॥ ॥೪॥

ತಾತ್ಪರ್ಯ : ಸರ್ವಪಂಡಿತರಿಂದಲೂ ಮಾನ್ಯರಾದ ಶ್ರೀಸುಕೃತೀಂದ್ರತೀರ್ಥರ ಮಠದಲ್ಲಿ, ಧೀಮಂತರಾದ ಶ್ರೀಕೃಷ್ಣಾಚಾರ್ಯರು ಸಕಲವೇದಾಂತಸಾರ, ತರ್ಕಶಾಸ್ತ್ರ ಮುಂತಾದ ಶಾಸ್ತ್ರಗಳಲ್ಲಿಯೂ ಮತ್ತು ಲೌಕಿಕ ವ್ಯವಹಾರದಲ್ಲೂ ಚತುರರೆನಿಸಿ ಪ್ರಖ್ಯಾತರಾದರು.

Rarest Archiver

ಇಂತಿರಲು ಕೃಷ್ಣಾರ್ಯರವರೊಡ । ನಾಂತು ಗುರ್ವಾಜ್ಞೆಯನುದೀಚೀ ।
ಪ್ರಾಂತದೊಳಂಚರಿಸಿ ಶಿಷ್ಯರ ಧನಸಹಾಯದಲಿ ॥
ಮಂತ್ರಸಾಲಯತುಂಗಭದ್ರಾ । ಪ್ರಾಂತರ ಶ್ರೀರಾಮಪುರದೊಳು ।
ಸಂತಸದೆ ಪ್ರಾಥಮಿಕವಿದ್ವತ್ಸಭೆಯ ಮಾಡಿದರೈ ॥ ॥೫॥

ತಾತ್ಪರ್ಯ : ಹೀಗಿರಲು, ಶ್ರೀಕೃಷ್ಣಾಚಾರ್ಯರು ಗುರುಗಳ ಅಪ್ಪಣೆಯಂತೆ ಶ್ರೀಮಂತ್ರಾಲಯ - ತುಂಗಭದ್ರಾ ಪ್ರಾಂತ್ಯದ ಶ್ರೀರಾಮಪುರದಲ್ಲಿ ಶಿಷ್ಯರ ಧನಸಹಾಯದಿಂದ ವೈಭವದಿಂದ ಕೂಡಿದ ಮೊದಲ ಕವಿಗಳು - ವಿದ್ವಾಂಸರುಗಳ ಸಭೆಯನ್ನು ಏರ್ಪಡಿಸಿದರು.

ಶಿಷ್ಟ ವಿದ್ವಜ್ಜನಕೆ ಸರ್ವೋ । ತ್ಕೃಷ್ಟಸಂಭಾವನೆಯ ವಿದ್ಯೆಯ ।
ಲಿಪ್ಸಪಡುವರಿಗೆಲ್ಲತರಗತಿಪಾರಿತೋಷಕವ ॥
ಸ್ಪಷ್ಟಮಾಗಿಸೆ ಭೂಸುರರ ಸಂ । ಮೃಷ್ಟಭೋಜನಭೂರಿದಕ್ಷಿಣೆ ।
ಯಷ್ಟುವಿತರಣೆಯಿಂದ ತುಷ್ಟಿಯ ಪಡೆದಿರಖಿಳಜನ ॥ ॥೬॥

ತಾತ್ಪರ್ಯ : ಅಲ್ಲಿ ಸೇರಿದ್ದ ವಿದ್ವಾಂಸರುಗಳಿಗೆಲ್ಲಾ ಉತ್ಕೃಷ್ಟವಾದ ಸಂಭಾವನೆಯನ್ನೂ ಮತ್ತು ವಿದ್ಯಾರ್ಥಿಗಳಿಗೂ ಬಹುಮಾನವನ್ನೂ ಕೊಡಿಸಿದರು. ಅನಂತರ ಬ್ರಾಹ್ಮಣರಿಗೆಲ್ಲಾ ಮೃಷ್ಟಾನ್ನ ಭೂರಿಭೋಜನವನ್ನು ಮಾಡಿಸಿ ಎಲ್ಲರನ್ನೂ ತೃಪ್ತಿಪಡಿಸಿದರು.

ಮುಂದೆ ಗುರುವರ ರಾಘವೇಂದ್ರರ । ಮಂದಕೃಪೆಯಿಂಪೊರಟು ಕೊಪ್ಪಳ ।
ಸುಂದರಗ್ರಾಮವನು ಕೃಷ್ಣಾಚಾರ್ಯರೆಯ್ದಿರಲು ॥
ಹಿಂದಿರುಗಿ ತತ್ಕ್ಷಣವೆ ಬರಬೇ । ಕೆಂದು ತಂತಿಯವಾರ್ತೆ ಗರಪುರ ।
ದಿಂದ ಬಂದುದು ಗುರುಶರೀರಾಲಸ್ಯವೈಷಯಿಕಂ ॥ ॥೭॥

ತಾತ್ಪರ್ಯ : ಅಲ್ಲಿಂದ ಮುಂದೆ ಶ್ರೀರಾಯರ ಕೃಪೆಯಿಂದ ಹೊರಟು ಕೊಪ್ಪಳವೆಂಬ ಸುರಪುರ ಗ್ರಾಮಕ್ಕೆ ಬಂದು ಸೇರಿದರು. ಆಗಲೇ ನಂಜನಗೂಡಿನಿಂದ ತಂತೀವಾರ್ತೆ ಬಂದು, ಗುರುಗಳ ಶರೀರದಲ್ಲಿ ಆಲಸ್ಯವುಂಟಾಗಿದೆ ಎಂದೂ, ಕೂಡಲೇ ಹಿಂತಿರುಗಿ ಬರಬೇಕೆಂದೂ ತಿಳಿದುಬಂದಿತು.

Rarest Archiver

ಆಗ ಕೃಷ್ಣಾಚಾರ್ಯರೊಡನೆಯೆ । ಸಾಗಿಸುತ ಪಯಣವನು ಜಾಗತ್ರೆ ।
ಯಾಗಿ ಮೂರನೆದಿವಸ ನಂಜನಗೂಡಸೇರಿದರು ॥
ಶ್ರೀಗುರುಗಳುತ್ಕ್ರಮಣಕಾಲ ಸ । ಮಾಗಮನ ಬಂಧ್ವಾಪ್ತದುಃಖವಿ ।
ರಾಗಸಹಗೃಹಕೃತ್ಯವಾಲೋಚಿಸಿತು ವಿಹಿತದಲಿ ॥ ॥೮॥

ತಾತ್ಪರ್ಯ : ಕೂಡಲೇ ಅಲ್ಲಿಂದ ಹೊರಟು ಶ್ರೀಕೃಷ್ಣಾಚಾರ್ಯರು ವೇಗವಾಗಿ ಪ್ರಯಾಣ ಮಾಡಿ ಮೂರನೇ ದಿವಸವೇ ನಂಜನಗೂಡಿಗೆ ಬಂದು ಸೇರಿದರು. ಗುರುಗಳ ಉತ್ಕ್ರಮಣಕಾಲ ಸಮೀಪಿಸಿತು ಎಂದು ಶಿಷ್ಯರೂ, ಮನೆಯವರೂ ಆಲೋಚಿಸಿದರು.

ಮಾರನೆಯ ಹರ್ಮ್ಯಖದೆಶ್ರಿಯವ । ರೂರಿನ ಪ್ರಮುಖರನುರಾಜ್ಯದ ।
ಕಾರುಬಾರಿಗಳನ್ನು ನಂಜುಂಡೇಶ್ವರನಗುಡಿಯ ॥
ಕಾರ್ಯನಿರ್ವಾಹಿಗಳ ಕರೆಸಿಯೆ । ಚಾರುವಚನಗಳೊಡನೆ ತಮ್ಮಯ ।
ಧೀರಕೃಷ್ಣಾಚಾರ್ಯರಿಗೆ ಗುರುಪಟ್ಟಫಲವೀಯೆ ॥ ॥೯॥

ತಾತ್ಪರ್ಯ : ಗುರುಗಳಾದ ಶ್ರೀಸುಕೃತೀಂದ್ರರು ಮರುದಿನವೇ ಊರಿನ ಗಣ್ಯವ್ಯಕ್ತಿಗಳನ್ನೂ, ರಾಜ್ಯದ ಅಧಿಕಾರಿಗಳನ್ನೂ, ಶ್ರೀನಂಜುಡೇಶ್ವರ ಗುಡಿಯ ಕಾರ್ಯನಿರ್ವಾಹಕರನ್ನು ಕರೆಯಿಸಿ ಅವರ ಸಮ್ಮುಖದಲ್ಲಿ ಶ್ರೀಕೃಷ್ಣಾಚಾರ್ಯರಿಗೆ ಗುರುಗಳ ಪಟ್ಟಕ್ಕೆ ಫಲವನ್ನು ಕೊಟ್ಟರು.

ವೇದಮೂರ್ತಿದಿಗಿಂದುಸಂಖ್ಯಾ । ಸಾಧಿತದಶಕಶಾಲಿವಾಹನ ।
ಶೋಧಿತಪರೀಧಾವಿಯಾಶ್ವಿನಶುದ್ಧದಶಮಿಯೊಳು ॥
ಬೋಧಕೃಷ್ಣಾಚಾರ್ಯರಮೃತ । ಶ್ರೀದಯಿತಸುಕೃತೀಂದ್ರತೀರ್ಥಸು ।
ಬೋಧಿತ ಸುಶೀಲೇಂದ್ರಗುರುಶರ್ಮದಲಿಜಸವಡೆದರ್ ॥ ॥೧೦॥

ಚಾರುಸನ್ಯಾಸಾಶ್ರಮಸ್ವೀ । ಕಾರಗುರುಪಟ್ಟಾಭಿಷೇಚನ ।
ವೂರಿನಲಿ ಮೆರವಣಿಗೆ ಗುರುನಿರ್ಯಾಣಸುಸ್ತೋತ್ರ ॥
ಶ್ರೀರಮಾವರರಾಮಪೂಜೆಯು । ಭೂರಿಸಂತರ್ಪಣೆಯು ಮೊದಲಹ ।
ಸಾರಕಾರ್ಯಗಳೆಲ್ಲ ಜರಗಿತು ಜನರುಕೊಂಡಾಡೆ ॥ ॥೧೧॥

Rarest Archiver

ತಾತ್ಪರ್ಯ : ನಂತರ ವೇದಾಂತ ಸಾಮ್ರಾಜ್ಯದಲ್ಲಿ ಅಭಿಷೇಕ ಮಾಡಿ 'ಶ್ರೀಸುಶೀಲೇಂದ್ರತೀರ್ಥರು' ಎಂದು ನಾಮಕರಣ ಮಾಡಿದರು. **ಪರೀಧಾವೀ ಸಂವತ್ಸರದ ಅಶ್ವೀಜ ಶುದ್ಧ ದಶಮಿಯಂದು** ಸುಶೀಲೇಂದ್ರರು ಗುರುಗಳ ಮಹಾಸಮಾರಾಧನೆಯನ್ನು ಮಾಡಿ ಚರಮಶ್ಲೋಕವನ್ನು ಪಠಿಸಿದರು. ನಂತರ ನೂತನ ಶ್ರೀಗಳಿಗೆ ಊರಿನಲ್ಲಿ ವೈಭವದಿಂದ ಮೆರವಣಿಗೆ ಭೂರಿಭೋಜನ ಸಂತರ್ಪಣೆಗಳು ನಡೆದವು.

ಬಳಿಕ ಮಹಿಶೂರಾವನೀಪತಿ । ಗಳಿಗೆ ಫಲಮಂತ್ರಾಕ್ಷತೆಯ ಸ ।
ಲ್ಲಲಿತ ವಾಕ್ಶ್ರೀಮುಖ ಕಳುಹಿದರಧಿಕವಿನಯದಲಿ ॥
ಜಲಜನಾಭನತೀರ್ಥಮಾಲ್ಯವ । ಫಲವಬಹುಮತಿಯಿತ್ತರಾಗುರು ।
ನಿಲಯಕೈತಂದಿರ್ದ್ದಸರ್ವರಿಗುಚಿತರೀತಿಯಲಿ ॥ ॥೧೨॥

ಪ್ರಕೃತ ನೂತನಗುರುಗಳಂತ । ರ್ವಿಕೃತಿಯಾಂತದವೈದಿಕದಮೇ ।
ಣ್ಪ್ರಕೃತಲೌಕಿಕಕಾರ್ಯವಿಮ್ಮಡಿಯಾಯ್ತು ಗುರುಗಳಿಗೆ ॥
ಪ್ರಕೃತಧನಸಹಕಾರಶೂನ್ಯವು । ಸುಕೃತಕರ್ಮಗಳೆಲ್ಲಮುಂದಣ ।
ಪ್ರಕೃತಿಯನ್ನನುಸರಿಸಿ ನಡೆಯಲವಶ್ಯಮೆನಿಸಿತ್ತು ॥ ॥೧೩॥

ತಾತ್ಪರ್ಯ : ನಂತರ ಮೈಸೂರು ಮಹಾರಾಜರಿಗೆ ಫಲಮಂತ್ರಾಕ್ಷತೆ ಮತ್ತು ಶ್ರೀಮುಖವನ್ನು ಆಶೀರ್ವಾದಪೂರ್ವಕ ಕಳುಹಿಸಿದರು. ಶ್ರೀಮಠಕ್ಕೆ ಬಂದಿದ್ದ ಭಕ್ತರಿಗೆಲ್ಲಾ ಪ್ರಸಾದ ಮಂತ್ರಾಕ್ಷತೆಯನ್ನು ದಯಪಾಲಿಸಿದರು. ಶ್ರೀಸಮಯದಲ್ಲಿ ನಡೆದ ಅನೇಕ ಅಭಿವೃದ್ಧಿ ಕಾರ್ಯಗಳಿಗೂ, ಮುಂದೆ ಮಾಡಬೇಕಾದ ಕಾರ್ಯಗಳಿಗೂ ಹಣದ ಅವಶ್ಯಕತೆಯಿಂದ ಸ್ವಲ್ಪ ಕಷ್ಟವಾಯಿತು.

ಆದಕಾರಣ ಗುರುಸುಶೀಲರು । ಖೇದಗೊಳ್ಳದೆ ಗಮನವಾದರು ।
ಸಾಧುಮಂತ್ರಾಲಯದ ಗುರುಗಳ ಪಾದದರ್ಶನಕೆ ॥
ಆದಿಯಿಂದೊರೆತಿರ್ಪ್ಪ ಗಜತುರ । ಗಾದಿ ಬಿರುದಾವಳಿಗಳಿಂಬ ।
ಲ್ಗೈದುವಿಡಿದ ಸಿಪಾಯಿಗಳಿನಧಿಕಾರಿಜನಸಹಿತ ॥ ॥೧೪॥

ತಾತ್ಪರ್ಯ : ಆದರೂ ಶ್ರೀಗಳು ಈ ಸಮಯದಲ್ಲಿ ಹೆಚ್ಚು ವ್ಯಸನಪಡದೆ, ಸ್ಥೈರ್ಯದಿಂದಿದ್ದು, ಶ್ರೀಮಂತ್ರಾಲಯ ಕ್ಷೇತ್ರಕ್ಕೆ ಶ್ರೀರಾಘವೇಂದ್ರರ ಪಾದದರ್ಶನಕ್ಕಾಗಿ ಕುದುರೆ, ಆನೆ, ಸಿಪಾಯಿಗಳು, ಬಿರುದಾವಳಿಗಳು, ಪರಿವಾರಸಹಿತವಾಗಿ ಹೊರಟರು.

Rarest Archiver

ಅಲ್ಲಗಲ್ಲಿಪುರಾಗ್ರಹಾರ । ಗಳಲ್ಲಿ ಭೂಸುರರಾದಿಜನಗಳಿ ।
ಗೆಲ್ಲ ದೇವರದರ್ಶನವು ತೀರ್ಥಪ್ರಸಾದಗಳು ॥
ಸಲ್ಲಿಸಲ್ಪಡುತಲ್ಲಿ ಶಿಷ್ಯರಿ । ಗೆಲ್ಲ ಮುದ್ರಾಧಾರಣಾದಿಗ ।
ಳುಲ್ಲಸಿತಚೇತಸ್ಕಗುರುಗಳು ಪೊರ್ದಿದರುಜಸವ ॥ ॥೧೫॥

ತಾತ್ಪರ್ಯ : ದಾರಿಯಲ್ಲಿ ಸಿಕ್ಕ ಹಳ್ಳಿಗಳೂ, ಅಗ್ರಹಾರಗಳಲ್ಲಿ ಅಲ್ಲಿನ ಜನಗಳಿಗೆ ದೇವರ ದರ್ಶನ ಮಾಡಿಸುತ್ತಾ, ಶಿಷ್ಯರಿಗೆಲ್ಲಾ ಮುದ್ರಾಧಾರಣೆ ಮಾಡುತ್ತಾ ಉಲ್ಲಾಸದಿಂದ ಪ್ರಯಾಣ ಮಾಡಿ ಯಶಸ್ಸನ್ನು ಕಳಿಸಿದರು.

ಒಂದೆರಡುತಿಂಗಳಲಿ ಸಿರಿಕೊಳ । ಬಂಧುರಗ್ರಾಮದಲಿಹ ರಾಘ ।
ವೇಂದ್ರಗುರುಬೃಂದಾವನದ ಸಂದರ್ಶನವ ಮಾಡಿ ॥
ಕುಂದತಪ್ಪಿಸಿ ರಾಯರಪ್ಪಣೆ । ಯಿಂದ ಬಳ್ಳಾರಿಯ ಸಮೀಪದೆ ।
ಚೆಂದವಾಗಿ ಹೊನ್ನಹಳ್ಳಿಯ ಸೇರಿಯಾಸ್ಥಳದೆ ॥ ॥೧೬॥

ತಾತ್ಪರ್ಯ : ಎರಡು ತಿಂಗಳು ಹೀಗೆ ಸಂಚಾರಮಾಡಿ ಸಿರಿಕೊಳವೆಂಬ ಸುಂದರ ಗ್ರಾಮದಲ್ಲಿನ ಶ್ರೀರಾಯರ ಬೃಂದಾವನದ ದರ್ಶನ ಮಾಡಿ ಅಲ್ಲಿಂದ ಬಳ್ಳಾರಿಯ ಹತ್ತಿರದ ಹೊನ್ನಹಳ್ಳಿಗೆ ಬಂದು ಸೇರಿದರು.

ವ್ಯಾಸರಾಯಗುರುಪ್ರತಿಷ್ಠಿತ । ಮೇಶಭಕ್ತಪ್ರಾಣದೇವರ ।
ನಾಶೆಯಿಂ ದರ್ಶಿಸುತ ಮನದಲಿ ಹರ್ಷಹೊಂದಿದರು ॥
ವ್ಯಾಸಟೀಕಾಚಾರ್ಯಪುಣ್ಯಮ । ಹೋತ್ಸವವನಾಸ್ಥಳದೋಚಿತ್ತೋ ।
ಲ್ಲಾಸಮಾಗಿಯೆನಡೆಸಿ ಭೂಸುರತೃಪ್ತಿಮಾಡಿದರು ॥ ॥೧೭॥

ತಾತ್ಪರ್ಯ : ಶ್ರೀವ್ಯಾಸರಾಯಗುರುಗಳಿಂದ ಪ್ರತಿಷ್ಟವಾದ ಶ್ರೀಪ್ರಾಣದೇವರನ್ನು ಭಕ್ತಿಯಿಂದ ದರ್ಶನ ಮಾಡಿ ದೇವಪೂಜಾ ಮತ್ತು ಧರ್ಮೋಪದೇಶವನ್ನು ಮಾಡುತ್ತಾ ಅಲ್ಲಿಯ ಜನರನ್ನು ತೃಪ್ತಿಪಡಿಸಿದರು.

Rarest Archiver

ಅಭಿನವ ಶ್ರೀಗುರುಶೀಲರು । ಪ್ರಭುಗುರು ಶ್ರೀರಾಘವೇಂದ್ರರ ।
ಶುಪದವ ಸೇವಿಸುತೆ ಪೂರ್ಣಾನುಗ್ರಹವ ಪಡೆದ ॥
ಪ್ರಭೆಯಿನನುದಿನ ತಮ್ಮ ತಪವ । ನ್ನಭಿಗುಣಿಸಿ ಶಿಷ್ಯಪ್ರಿಯಾಶ್ರಿತ ।
ರಭಿಮತವ ಕೈಕೊಳಿಸಿ ಮಂತ್ರಾಲಯವ ಸೇರಿದರು ॥ ॥೧೮॥

ತಾತ್ಪರ್ಯ : ಶ್ರೀಸುಶೀಲೇಂದ್ರಗುರುಗಳು ಶ್ರೀರಾಘವೇಂದ್ರರ ಶುಭಪದ ಸೇವಿಸುತ, ಅವರ ಪೂರ್ಣ ಅನುಗ್ರಹದಿಂದ, ತಮ್ಮ ಶಿಷ್ಯರ ಆಶ್ರಿತರ ಅಭಿಮತದಂತೆ ಮಂತ್ರಾಲಯವನ್ನು ಸೇರಿದರು.

ಅವರು ಗರಪುರದ ಮಠದ ಸಂಸ್ಥಾ । ನವನು ವೃದ್ಧಿಯ ಗೊಳಿಸುವಂತಹ ।
ಲವಲವಿಕೆಯಿಂದಿರ್ದ್ದರಲ್ಲದೆ ಬೇರೆಮನವಿಲ್ಲ ॥
ತವಿಸಿ ಪೂರ್ವಾಶ್ರಮದ ಸುಖದನು । ಭವವ ವೈರಾಗ್ಯದಲಿ ಲಕ್ಷ್ಮೀ ।
ಧವನ ಪೂಜಾನಿರತರಾದ ಸ್ಥೈರ್ಯಮಾನಸದೆ ॥ ॥೧೯॥

ತಾತ್ಪರ್ಯ : ಅವರ ಮನಸ್ಸು ಸದಾಕಾಲದಲ್ಲಿಯೂ ನಂಜನಗೂಡು ಮಠದ ಸಂಸ್ಥಾನದ ಅಭಿವೃದ್ಧಿಕಾರ್ಯದಲ್ಲೆ ನಿರುತವಾಗಿತ್ತೇ ವಿನಹ ಬೇರೆ ಯಾವ ಆಸೆಯೂ ಇರಲಿಲ್ಲ. ಭಕ್ತಿ-ವೈರಾಗ್ಯಗಳಿಂದ ಕೂಡಿ, ಸ್ಥೈರ್ಯದಿಂದ ಶ್ರೀಮೂಲರಾಮನ ಪೂಜೆಯಲ್ಲಿ ನಿರತರಾಗಿದ್ದರು.

ಆವ ಸುಲಭೋಪಾಯದಿಂದಲೆ । ತಾವು ಕೈಕೊಂಡಖಿಳಕಾರ್ಯವ ।
ಭಾವಬೇರಿಲ್ಲದೆಯೆ ನಡೆಸುತ ಹರಿಕಥಾಮೃತವ ॥
ಸೇವಿಸುತ ಶಿಷ್ಯಪ್ರಶಿಷ್ಯರ । ಭಾವಕವಿರೋಧಮೆನೆದ್ರುವ್ಯಾ ।
ಭಾವಮಂ ನೀಗಿದರು ಮಠದಧಿಕಾರದರ್ಪದಲಿ ॥ ॥೨೦॥

ತಾತ್ಪರ್ಯ : ತಾವು ಕೈಗೊಂಡ ಎಲ್ಲಾ ಕಾರ್ಯಗಳನ್ನೂ ಸುಲಭವಾಗಿ ಮುಗಿಸುತ್ತಾ ಬಂದರು. ಮಠದ ಕಲಾಪಗಳನ್ನು ಬಹು ವಿಜೃಂಭಣೆಯಿಂದ ನಡೆಸುತ್ತಾ ಬಂದರು.

Rarest Archiver

ರಾಯರುತ್ಸವ ವಿಗ್ರಹವು ಶೋ । ಭಾಯಮಾನದೆ ರಜತಮಯರಮ ।
ಣೀಯ ಹಯಗಜಮುಖ್ಯವಾಹನ ಬಿರುದುಗಳುಸಹಿತ ॥
ದಾಯದಿಂ ವಾದೀಂದ್ರಮಣ್ಟಪ । ವಾಯವರಿತಾ ಪಾಕಶಾಲೆಯು ।
ಪಾಯದಿಂದಭಿನವಿಲಾಮಂಟಪವು ನಿರ್ಮಿಸಿತು ॥ ॥೨೦॥

ತಾತ್ಪರ್ಯ : ಕ್ರಮೇಣ ಹಣದ ಕೊರತೆಯು ನೀಗುತ್ತಾ ಬಂತು. ಶ್ರೀರಾಯರಿಗೆ ಸುಂದರವಾದ ಉತ್ಸವಮೂರ್ತಿಯನ್ನೂ, ಬೆಳ್ಳಿಯ ಗಜವಾಹನ, ಹಯವಾಹನ, ಬಿರುದಾವಿಲಗಳನ್ನು ಮಾಡಿಸಿದರು. ಶ್ರೀವಾದೀಂದ್ರರ ಬೃಂದಾವನಕ್ಕೆ ಮಂಟಪ ಮತ್ತು ವಿಶಾಲವಾದ ಅಡುಗೆಮನೆ ಇತ್ಯಾದಿ ಸಿದ್ಧವಾದವು.

ಗುರುಗಳಲ್ಲಿ ಪ್ರಮಾದಿಸುವ । ತ್ಸರದ ಚಾತುರ್ಮಾಸ್ಯವ ಶ್ರೀ ।
ಗುರುಗಳಾರಾಧನೆಯ ನೆರವೇರಿಸಿಯೆಸಮನಿಸಿದ ॥
ಗುರು ಶರನ್ನವರಾತ್ರಿಯುತ್ಸವ । ವರಸಮಾರಾಧನೆಗಳನ್ನಾ ।
ಚರಿಸಿ ಬಹುಲೋದಾರಿಯೆನಿಸಿದರಖಿಳಜನರಿಂದ ॥ ॥೨೧॥

ತಾತ್ಪರ್ಯ : ಆ ಪ್ರಮಾದೀ ಸಂವತ್ಸರದಲ್ಲಿ ಚಾತುರ್ಮಾಸ್ಯಕ್ಕೆ ಮಂತ್ರಾಲಯದಲ್ಲೇ ಕುಳಿತರು. ಶ್ರೀರಾಘವೇಂದ್ರಗುರುಗಳ ಆರಾಧನೆಯನ್ನು ಮತ್ತು ನವರಾತ್ರಿ ದಿನಗಳಲ್ಲಿ ಎಲ್ಲಾ ಉತ್ಸವಗಳನ್ನು, ಎಲ್ಲಾ ಜನರೂ ಒಪ್ಪುವಂತೆ ನಡೆಸಿ ಬಹಳ ಉದಾರಿಗಳು ಎನಿಸಿಕೊಂಡರು.

ಆಗ್ರಹಾಯಣಿಮಾಸದಲಿ ಸುಸ । ಮಗ್ರಮಾಗಿ ಮತತ್ರಯದ ಶಾ ।
ಸ್ತ್ರಾಗ್ರಗಣ್ಯಸುಪಂಡಿತರ ಸಭೆಯನ್ನು ಕೂಡಿಸುತೆ ॥
ಉಗ್ರತರದುಕ್ತಿಗಳನೆಲ್ಲವ । ನಿಗ್ರಹಿಸಿ ಪರಕೀಯಮತದ ದು ।
ರಾಗ್ರಹವು ಪುಟ್ಟದೊಲು ಸತ್ಕರಿಸಿದರುಸರ್ವರನು ॥ ॥೨೨॥

ತಾತ್ಪರ್ಯ : ಮುಂದೆ ಮತತ್ರಯದ ಅಗ್ರಗಣ್ಯರಾದ ಪಂಡಿತರ ಸಭೆಯನ್ನು ನಡೆಸಿ ಪರಕೀಯ ಮತದ ದುರುಕ್ತಿಗಳನ್ನು ನಿಗ್ರಹಿಸಿ ಜನರಲ್ಲಿ ದುರಾಗ್ರಹವು ಹುಟ್ಟದಂತೆ ಎಲ್ಲರನ್ನೂ ಸತ್ಕರಿಸಿದರು.

Rarest Archiver

ಕರೆಯಿಸಿದ ವಿದ್ವಾಂಸರಿಗೆ ಮೇ । ಣ್ತರಗತಿಯ ವಿದ್ಯಾರ್ಥಿಗಳಿಗುಂ ।
ಪರಿವಿಡಿಯಸಂಭಾವನೆಯನಿತ್ತಖಿಳವಿಪ್ರರಿಗೆ ॥
ಸರಸಭೋಜನವವರವರ ಮಠ । ಗುರುಳಾಜ್ಞೆಗೆ ಲೋಪವಾಗದ ।
ತೆರದೆ ಕಲ್ಪಿಸಿ ತಣಿಸಿದರು ಸಹಭೂರಿದಕ್ಷಿಣೆಯಿಂ ॥ ॥೨೪॥

ತಾತ್ಪರ್ಯ : ಬಂದಂತಹ ವಿದ್ವಾಂಸರಿಗೂ ಮತ್ತು ವಿದ್ಯಾರ್ಥಿಗಳಿಗೂ ಉಚಿತವಾದ ಸಂಭಾವನೆಯನ್ನು ಕೊಟ್ಟು, ಅವರವರ ಮಠದ ಗುರುಗಳ ಆಜ್ಞೆಗೆ ಲೋಪವಾಗದಂತೆ ಎಲ್ಲರಿಗೂ ಭೂರಿಭೋಜನ ಮಾಡಿಸಿ, ದಕ್ಷಿಣೆಗಳನ್ನು ಕೊಟ್ಟು, ಸನ್ಮಾನ ಪಡಿಸಿದರು.

ಈ ಪರಿಯೊಳತಿಶಯದ ಕೀರ್ತಿಕ । ಲಾಪವನು ಕೈಕೊಳುತೆ ।
ಜನಸಲ್ಲಾಪವಿಶ್ವಾಸಕ್ಕೆ ಗುರುಗಳು ಪಾತ್ರರಾದಲರಾ ॥
ಶ್ರೀಪತಿಯ ಕೃಪೆಯಿಂ ಸದಾನ್ನವಿ । ಹಾಪಿತವಮಾಡುತ್ತ ಬಡವರಿ ।
ಗಾಪ್ತಬಂಧುವರೇಣ್ಯರೆನಿಸಿದರೆಲ್ಲಕಡೆಗಳಲಿ ॥ ॥೨೫॥

ತಾತ್ಪರ್ಯ : ಈ ರೀತಿಯಲ್ಲಿ ಕೀರ್ತಿಕಲಾಪಗಳನ್ನು ನಡೆಸುತ್ತಾ ಎಲ್ಲಾ ಜನರ ವಿಶ್ವಾಸಕ್ಕೂ ಪಾತ್ರರಾದರು. ಶ್ರೀಹರಿಯ ಕೃಪೆಯಿಂದ ಅನ್ನದಾನವನ್ನು ಮಾಡುತ್ತಬಡವರ ಆಪ್ತಬಂಧುಗಳೆಂಬ ಕೀರ್ತಿಯನ್ನು ಪಡೆದರು.

ಬಹುಳ ವರ್ಷಗಳಿಂದ ಮರೆಯಂ । ವಹಿಸಿದ ಶ್ರೀರಾಘವೇಂದ್ರರ ।
ಮಹಿತಮಠವೀಗುರುಸುಶೀಲರ ಪಟ್ಟವಹನೆಯಲಿ ॥
ಬಹುಕುಶಲದಿಂ ಮೆರೆವುದೆಂಬೀ । ಸುಹಿತವಾಣಿಯ ಕೇಳ್ದುಶಿಷ್ಯರು ।
ಬಹುಲ ಸಂತೋಷದಲಿ ಹರಿಗುರುಗಳನು ನುತಿಸಿದರು ॥ ॥೨೬॥

ತಾತ್ಪರ್ಯ : ಅನೇಕ ವರ್ಷಗಳಿಂದ ಹೆಚ್ಚಾಗಿ ಮರೆಯಲ್ಲೇ ಇದ್ದು ಮೆರೆದ ಶ್ರೀರಾಘವೇಂದ್ರರ ಮಠವು, ಶ್ರೀಸುಶೀಲೇಂದ್ರರ ಕಾಲದಲ್ಲಿ ಬಹಳವಾಗಿ ಅಭಿವೃದ್ಧಿಗೊಂಡು ಭಕ್ತರು ಹರಿಗುರುಗಳನು ಸ್ತುತಿಸಿದರು.

Rarest Archiver

ಇಂತಿರ್ಪ್ಪಸಮಯದಲಿ ಲಕ್ಷ್ಮೀ । ಕಾಂತನತಿಚ್ಛೆಯನಾಂತಗುರುಗಳ ।
ನಂತಬಿರುಗಾವಳಿಗಳಿಂ ಪರಿವಾರಯುತರಾಗಿ ॥
ಮಂತ್ರಾಣಲಯದಿಂ ತೆರಳಿ ತ । ತ್ಪ್ರಾಂತರಗ್ರಾಮಗಳ ಚರಿಸುತೆ ।
ಸಂತರಿಂ ಸತ್ಕಾರಗೊಂಡರು ಕಾಣಿಕೆಗಳೊಡನೆ ॥ ॥೨೭॥

ತಾತ್ಪರ್ಯ : ಹೀಗಿರುವಲ್ಲಿ ಶ್ರೀಲಕ್ಷ್ಮೀಕಾಂತನ ಇಚ್ಛೆಯಂತೆ ಶ್ರೀಸುಶೀಲೇಂದ್ರರು ಪರಿವಾರದೊಂದಿಗೂ ಶಿಷ್ಯರು ಬಿರುದಾವಲಿಗಳಿಂದಲೂ ಕೂಡಿ, ಸುತ್ತಮುತ್ತಲ ಗ್ರಾಮಗಳಲ್ಲೂ, ನಗರಗಳಲ್ಲೂ ಸಂಚಾರಮಾಡುತ್ತಾ ಎಲ್ಲರಿಂದಲೂ ಮನ್ನಣೆ ಪಡೆದರು.

ಕೆಲರಸೂಯಾಪರರು ತಮ್ಮಯ । ಗಲಭೆಯನು ದೂರಿದರು ಪಡೆಯಲಿ ।
ಕೊಲಿಮೆಯಂ ಪ್ರಥಿತೋತ್ತರಾದಿಯ ಮಠದ ಗುರುಗಳಲಿ ॥
ಸುಲಲಿತಪ್ರಜ್ಞಾವಿಶೇಷವ । ತಳೆದಿರುವ ಶ್ರೀಸತ್ಯತೀರ್ಥರು ।
ಚಲನಗೊಡದೆಯೆ ಚಿತ್ತಮಂ ಸಮದರ್ಶಿಯೆನಿಸಿದರು ॥ ॥೨೮॥

ತಾತ್ಪರ್ಯ : ಕೆಲವು ಅಸೂಯಾಪರರು, ಶ್ರೀಉತ್ತರಾದಿಮಠದ ಶ್ರೀಗಳ ಒಲುಮೆಯನ್ನು ಪಡೆಯುವ ದೃಷ್ಟಿಯಿಂದ ಶ್ರೀಸತ್ಯಧ್ಯಾನತೀರ್ಥರ ಬಳಿಗೆ ಹೋಗಿ ದೂರತೊಡಗಿದರು. ಆದರೆ ಸಮದರ್ಶಿಗಳಾದ ಅವರು ದೂರುಗಳಿಗೆ ಕಿವಿಗೊಡದೆ ಅವರನ್ನು ಧಿಕ್ಕರಿಸಿದರು.

ಕಡೆಗೆ ರಾಯರ ಮಠದ ಗುರುಗಳು । ಮೊಡನೆ ಸತ್ಯಧ್ಯಾನತೀರ್ಥರು ।
ಮೊಡವೆರೆದು ಬಳ್ಳಾರಿಯೊಳು ಬೀಡಾರಮಾಡಿದರು ॥
ಜಡಕುಮತಿಗಳು ಕೆಲಬರುಭಯರ । ಕಡೆಯಲಿರ್ದ್ದುದನುಭಯಗುರುಗಳು ।
ಜಡಿದು ಶಾಸನಮಾಡಿದರು ಸೌಹಾರ್ದರೀತಿಯಲಿ ॥ ॥೨೯॥

ತಾತ್ಪರ್ಯ : ನಂತರ ಶ್ರೀಸುಶೀಲೇಂದ್ರರು ಮತ್ತು ಶ್ರೀಸತ್ಯಧ್ಯಾನತೀರ್ಥರು ಬಳ್ಳಾರಿ ನಗರದಲ್ಲಿ ಬಂದು ಬೀಡಾರ ಮಾಡಿದರು. ಕೆಲವು ಮಠದ ಯತಿಗಳು ಎರಡೂ ಕಡೆ ಹೋಗಿ ಕೀಟಲೆಗಳನ್ನು ಮಾಡುತ್ತಿದ್ದರು. ಅದನ್ನು ತಪ್ಪಿಸಲು ಇಬ್ಬರು ಶಿಷ್ಯರಿಗೆ ಆಜ್ಞೆ ಮಾಡಿ ಬುದ್ಧಿ ಹೇಳಿದರು.

Rarest Archiver

ಉಭಯಮಠದ ಮಹಾಭಿಷೇಕದ । ವಿಭವ ಬಳ್ಳಾರಿಯೊಳು ನಡೆಸಲು ।
ಶುಭದ ಕಾರ್ತಿಕಶುಕ್ಲಪಾಡ್ಯಮಿಯೊಳಗೆ ನಿರ್ಧರಿಸಿ ॥
ರಭಸದಿಂ ಬೇಕಾದವಸ್ತುಗ । ಳುಭಯಮಠದವರಭಿಮತಕೆ ಬಹು ।
ವಿಭವದಿಂ ಸಿದ್ಧತೆಯ ಗೊಳಿಸಲ್ಪಟ್ಟವಲ್ಲಲ್ಲಿ ॥ ॥೩೦॥

ತಾತ್ಪರ್ಯ : ಎರಡೂ ಮಠದ ಶ್ರೀಗಳವರೂ ಕಾರ್ತಿಕ ಶುಕ್ಲ ಪಾಡ್ಯಮಿ ದಿನ ಮಹಾಭಿಷೇಕವನ್ನು ಬಳ್ಳಾರಿಯಲ್ಲಿ ಒಟ್ಟಿಗೇ ನಡೆಸಲು ನಿರ್ಧರಿಸಿದರು. ಬೇಕಾದ ಏರ್ಪಾಡುಗಳನ್ನು ಎರಡೂ ಮಾಡುತ್ತ ಸಕಲ ವಸ್ತುಗಳನ್ನು ತರಿಸಿ ಸಿದ್ಧಮಾಡಿದರು.

ರಾಘವೇಂದ್ರರ ಮಠವು ಹೆಚ್ಚಿನ । ದಾಗಿ ಮೂಲರಾಮದೇವರು ।
ರಾಗದಿಂದಿರುತಿರ್ಪ್ಪರೆನ್ನುತೆಪಲಬರಲ್ಲಲ್ಲಿ ॥
ಸಾಗದೀನುಡಿಯುತ್ತರಾದಿಸು । ಯೋಗಮಠದೊಳ್ಮೂಲರಾಮರು ।
ರಾಗಿಸಿದರೆಂದೆನುತಲರೆಬರ್ನೆರೆದರತಿಶಯದೆ ॥ ॥೩೧॥

ತಾತ್ಪರ್ಯ : ಕೆಲವರು ಶ್ರೀಮೂಲರಾಮರು ರಾಯರಮಠದಲ್ಲಿದೆ ಎಂದೂ, ಕೆಲವರು ಉತ್ತರಾದಿಮಠದಲ್ಲಿದೆ ಎಂದೂ ವಾದ ಮಾಡುತ್ತಿದ್ದರು.

ಸತ್ಯನಾರಾಯಣನ ಗುಡಿಗುಪ । ಕೃತ್ಯವಹಮೇಲುಗಿರಿರಾಯರ ।
ಪ್ರತ್ಯಯದಬಂಗಲೆಯೊಳಭಿಷೇಕಾರ್ಥಮಂಟಪವು ॥
ಸ್ತುತ್ಯಮೆನೆರಚಿಸಿತ್ತು ಕದಳೀ । ಪತ್ರಮಾವಿನತಳಿರತೋರಣ ।
ವತ್ಯಲಂಕೃತಿಯಿಂದ ರಾಯರ ಮಠದ ದೇವರಿಗೆ ॥ ॥೩೨॥

ತಾತ್ಪರ್ಯ : ಶ್ರೀಸತ್ಯನಾರಾಯಣದೇವರ ಗುಡಿಯ ವ್ಯವಸ್ಥಾಪಕರಾದ ಶ್ರೀಮೇಲುಗಿರಿರಾಯರ ಬಂಗಲೆಯಲ್ಲಿ ಅಭಿಷೇಕದ ಮಂಟಪವನ್ನು ರಚಿಸಲಾಗಿತ್ತು. ಮಂಟಪವು ಮಾವು, ಬಾಳೇಗಿಡಗಳ ತಳಿರು ತೋರಣಗಳಿಂದ ಅಲಂಕೃತವಾಗಿತ್ತು.

ತರಿಸಿ ಬಗೆಬಗೆಯಾದ ಪೂಗಳ । ಸರಗಳಂ ರಸಭರಿತಫಲಗಳ ।
ಪರಿಮಳದ್ರವ್ಯಗಳ ಪಂಚಾಮೃತಸುವಸ್ತುಗಳ ॥
ಇರಿಸಿ ಬೆಳ್ಳಿಯ ತಟ್ಟೆ ಹೊನ್ನಿನ । ಭರಣಿಬಟ್ಟಲುಗಳೊಳು ಮಂಗಳ ।
ಕರದ ವಾದ್ಯಗಳಿಂದ ಮೆರೆದುದು ಗುರುಗಳಾಸ್ಥಾನ ॥ ॥೩೩॥

ತಾತ್ಪರ್ಯ : ನಾನಾ ಬಗೆಯ ಹೂಗಳ ಸರಗಳಿಂದಲೂ, ಪಂಚಾಮೃತದ ವಸ್ತುಗಳನ್ನು ಬೆಳ್ಳಿಯ ತಟ್ಟೆಗಳಲ್ಲಿ, ಬಂಗಾರದ ಬಟ್ಟಲುಗಳಲ್ಲಿ ಸಿದ್ಧವಾಗಿದ್ದವು. ಜೊತೆಗೆ ನಾನಾ ಬಗೆಯ ವಾದ್ಯಗಳು ಮೊಳಗುತ್ತಿದ್ದವು. ಗುರುಗಳ ಆಸ್ಥಾನವು ಮನೋಹರವಾಗಿ ಕಂಗೊಳಿಸಿತು.

Rarest Archiver

ಸ್ಮಾರ್ತವೈಷ್ಣವಭೇದಮಿಲ್ಲದೆ । ಪ್ರಾರ್ಥಿತತ್ರಿಮತಸ್ಥವಿಪ್ರರ ।
ಸಾರ್ಥಸುಸ್ವರಮಂತ್ರದೊಡನಭಿಷೇಕಪೂಜೆಗಳು ॥
ಪೂರ್ತಿಯಾದುವು ಸರ್ವಜನರಿಗೆ । ತೀರ್ಥಮೂಲ್ಯಸುಭೋಜನಂಗಳು ।
ಸಾರ್ಥನಾಮ ಸುಶೀಲತೀರ್ಥರ ಧರ್ಮಬೋಧೆಯಲಿ ॥ ॥೩೪॥

ತಾತ್ಪರ್ಯ : ಸ್ಮಾರ್ತ-ವೈಷ್ಣವ-ಶ್ರೀವೈಷ್ಣವ ಭೇದವಿಲ್ಲದೆ, ಮೂರು ಮತಗಳ ಭಕ್ತರು ಸೇರಿದ್ದರು. ಸುಸ್ವರವಾದ ಮಂತ್ರ-ವೇದಪಾರಾಯಣಗಳಿಂದ ಕೂಡಿ ಅಭಿಷೇಕವು, ಪೂಜೆಗಳು, ವೈಭವದಿಂದ ನಡೆದ ಮೇಲೆ ಸರ್ವರಿಗೂ ತೀರ್ಥಪ್ರಸಾದ ಭೋಜನಾದಿಗಳು ಜರುಗಿದವು.

ಕನಕಮಯಮಣ್ಟಪದ ಮಧ್ಯದೆ । ಜನಕಜಾಸಹ ಮೂಲರಾಮರ ।
ವಿನುತಮೂರ್ತಿಯುಮದರೆಡಬಲಂಗಳಲಿ ದಿಗ್ವಿಜಯ ॥
ರೆನಿಪ ರಾಮರು ಜಯರಾಮರು । ಮನಕೆ ಸುಂದರಮೆನಲು ಮೇಲ್ಗಡೆ ।
ವಿನುತಲಕ್ಷ್ಮ್ಯಯ ಸಹಿತ ನಾರಾಯಣಸುವಿಗ್ರಹವು ॥ ॥೩೫॥

ತಾತ್ಪರ್ಯ : ಬಂಗಾರದ ಮಂಟಪದ ಮಧ್ಯೆ ಸೀತಾದೇವಿ ಸಮೇತ ಶ್ರೀಮೂಲರಾಮರ ಸುಂದರಮೂರ್ತಿ, ಎಡಬಲಗಳಲ್ಲಿ ಶ್ರೀದಿಗ್ವಿಜಯ ರಾಮದೇವರು, ಶ್ರೀಜಯರಾಮದೇವರು, ಮೇಲುಗಡೆ ಗರುಡವಾಹನ ಶ್ರೀಲಕ್ಷ್ಮೀನಾರಾಯಣದೇವರ ಮೂರ್ತಿಗಳು ಕಂಗೊಳಿಸಿದವು.

ಮೂಲರಾಮರಕೆಳಗಡೆಗೆ ಶ್ರೀ । ಭೂಲತಾಂಗಿಯರೊಡವೆರಸಿ ಬಹು ।
ಲೀಲೆದೋರುವ ವಾಸುದೇವಪ್ರತಿಮೆಯೆಡಹಲದೆ ॥
ಶಾಲವಿಗ್ರಹವರದರಾಜವಿ । ಶಾಲಶೋಭನಕೃಷ್ಣಮೂರ್ತಿ ಸು ।
ಲೀಲೆಯಿಂ ಕಣ್ಗೊಳಿಸೆ ನೋಟಕರೆಲ್ಲ ಹಿಗ್ಗಿದರು ॥ ॥೩೬॥

ತಾತ್ಪರ್ಯ : ಶ್ರೀಮೂಲರಾಮರ ವಿಗ್ರಹದ ಕೆಳಗೆ ಶ್ರೀಭೂದೇವಿ ಸಹಿತ ಶ್ರೀವೈಕುಂಠವಾಸುದೇವರು (ಶ್ರೀಭೂದುರ್ಗಾಸಮೇತ ಅಲ್ಲಿಯೇ ಶ್ರೀವರದರಾಜ ದೇವರು, ವೈಕುಂಠವಾಸುದೇವರು) ಶ್ರೀಕೃಷ್ಣನ ಮೂರ್ತಿಗಳನ್ನು ಭಕ್ತರೆಲ್ಲಾ ನೋಡಿ ಆನಂದಿಸಿದರು.

Rarest Archiver

ಇಂತು ದೇವರ ಸಂನಿಧಾನದೊ । ಳಾಂತನಿರ್ಮಲಮನದೆ ಪೂಜೆಯ ।
ನೊಂತರಾ ಗುರುರಾಘವೇಂದ್ರರ ಮಹದನುಗ್ರಹದೆ ॥
ಎಂತೆನಿತು ಧನ್ಯರೊ ಸುಶೀಲೇಂ । ದ್ರಾಂತರಾತ್ಮರು ಎಂದು ಜನಗಳ ।
ನಂತಮುದದಿಂ ಪೊಗಳಸಭೆ ವೈಕುಂಠದವೊಲಿತ್ತು ॥ ॥೩೭॥

ತಾತ್ಪರ್ಯ : ಶ್ರೀಸುಶೀಲೇಂದ್ರತೀರ್ಥರು ಶ್ರೀರಾಘವೇಂದ್ರರ ಅನುಗ್ರಹಕ್ಕೆ ಪಾತ್ರರಾಗಿ ಭಕ್ತರನ್ನು ಪೊರೆಯುತ್ತಿದ್ದಾರೆ. ಅವರು ಎಷ್ಟು ಧನ್ಯರೋ ಎಂದು ಕೊಂಡಾಡುತ್ತಿರಲು ಆ ಸಭೆಯು ವೈಕುಂಠದಂತೆ ಕಂಗೊಳಿಸಿತು.

ಉಭಯಮತಯತಿವರ್ಯರೀಪರಿ । ವಿಭವದಿಂದಭಿಷೇಕಪೂಜಾ ।
ಸಭೆಗಳಂ ನೆರವೇರಿಸಿಯೆ ತಚ್ಛಿಷ್ಯಜನಕೆಲ್ಲ ॥
ಅಭಯಮುದ್ರಾಧಾರಣಾದಿಯ । ರಭಸಮಿಲ್ಲದೆ ನಡೆಸುತವರಿಗೆ ।
ಸಫಲಮಂತ್ರಾಕ್ಷತೆಯನೀಯುತೆ ಮುಂದೆ ತೆರಳಿದರು ॥ ॥೩೮॥

ತಾತ್ಪರ್ಯ : ಉಭಯ ಶ್ರೀಪಾದಂಗಳವರೂ ಈ ರೀತಿ ವೈಭವದಿಂದ ಪೂಜೆ-ಸಭೆಗಳನ್ನು ನೆರವೇರಿಸಿ ತಮ್ಮ ಶಿಷ್ಯರುಗಳಿಗೆಲ್ಲಾ ಅಭಯ ಮುದ್ರಾಧಾರಣೆ ಮಾಡಿ ಫಲಮಂತ್ರಾಕ್ಷತೆಯನ್ನು ಕೊಟ್ಟು ಮುಂದೆ ನಡೆದರು.

ಗುರುಸುಶೀಲೇಂದ್ರಾಖ್ಯತೀರ್ಥರು । ತೆರಳಿ ಮುಂದಣನಾಡಚರಿಸುತ ।
ಪುರವಹೊಸಪೇಟೆಯನು ಸೇರಿದರಲ್ಲಿ ಪುರಜನರ ॥
ಸರಳತೆಯಿನಾನಂದವತ್ಸರ । ನಿರುಪಮಶ್ರೀರಾಮನವಮೀ ।
ವರಮಹೋತ್ಸವನಡೆದುದತ್ಯಾನಂದಕರವಾಗಿ ॥ ॥೩೯॥

ತಾತ್ಪರ್ಯ : ಗುರುಸುಶೀಲೇಂದ್ರರು ಅಲ್ಲಿಂದ ಹೊರಟು ಹೊಸಪೇಟೆ ಎಂಬ ನಗರವನ್ನು ಸೇರಿ ಅಲ್ಲಿ ಆನಂದ ಸಂವತ್ಸರದ ಶ್ರೀರಾಮನವಮಿ ಹಬ್ಬವನ್ನು - ಅದರ ಪ್ರಯುಕ್ತ ಅಭಿಷೇಕವನ್ನು ವೈಭವದಿಂದ ನೆರವೇರಿಸಿದರು.

Rarest Archiver

ಶ್ರೀಧರನ ಕರುಣದಲಿ ಶಿಷ್ಯರ । ಪಾದಪೂಜಾದ್ರವ್ಯಮೊದಗಿತು ।
ಸಾಧುಧನಿಕಸಹಾಯಧನಸಹ ಮಠದ ಬೊಕ್ಕಸಕೆ ॥
ಗೋಧನವು ದಿನದಿನಕೆ ಹೆಚ್ಚಿತು । ಸಾಧುಶಿಷ್ಯರಿಗೆಲ್ಲ ಮಠದಲಿ ।
ಬೋಧರೂಪದ ಧನವು ಹರಿಗುರುಭಕ್ತಿಯುಂ ಜನರೊಳ್ ॥ ॥೪೦॥

ತಾತ್ಪರ್ಯ : ಹೊಸಪೇಟೆಯಲ್ಲಿ ಶ್ರೀಹರಿಯ ಅನುಗ್ರಹದಿಂದ ಅನೇಕ ಶಿಷ್ಯರು ಗುರುಗಳಿಗೆ ಪಾದಪೂಜೆ ಭಿಕ್ಷಾಸೇವೆಗಳನ್ನು ನೆರವೇರಿಸಿದರು. ಶ್ರೀಮಠದ ಬೊಕ್ಕಸಕ್ಕೆ ಬಹಳವಾದ ಧನಸಂಗ್ರಹವಾಯ್ತು. ಹಾಗೆಯೇ ಮಠದ ಗೋವುಗಳ ಸಂಖ್ಯೆಯೂ ಹೆಚ್ಚಿತು. ಜನರು ತಮ್ಮ ಗುರುಭಕ್ತಿಯನ್ನು ಮೆರೆದರು.

ಶ್ರೀಯವರುದಿಗ್ವಿಜಯಯಾತ್ರೆಯ । ಗೈಯ್ಯುತಾಯಾ ಕಾಲದೊಳ್ಕಮ ।
ನೀಯಮಂತ್ರಾಲಯದೊಳೇಸೇರುತ್ತೆ ಭಕ್ತಿಯಲಿ ॥
ರಾಯಗುರ್ವಾರಾಧನೆಯ ರಮ । ಣೀಯವಿದ್ವಜ್ಜನದಗೋಷ್ಠಿಯ ।
ಶ್ರೀಯನವರಾತ್ರಿಯನು ಸಹ ನೆರವೇರಿಸಿದರಲ್ಲಿ ॥ ॥೪೧॥

ತಾತ್ಪರ್ಯ : ಗುರುಗಳು ಶಿಷ್ಯರಿಗೆ ಧರ್ಮಬೋಧೆಯನ್ನು ಮಾಡಿದರು. ಈ ರೀತಿ ದಿಗ್ವಿಜಯ ಮಾಡುತ್ತಾ ಶ್ರೀಯವರು ಪರಿವಾರ ಸಮೇತ ಮಂತ್ರಾಲಯ ಕ್ಷೇತ್ರವನ್ನು ಸೇರಿದರು. ಅಲ್ಲಿ ನವರಾತ್ರಿ ಮಹೋತ್ಸವವನ್ನು, ಅದರ ಅಂಗವಾಗಿ ವಿದ್ವಾಂಸರ ಸಭೆಯನ್ನೂ ಮಾಡಿ ಗುರುಗಳ ಮಹಾಸಮಾರಾಧನೆಯನ್ನು ಆಚರಿಸಿದರು.

ನಳಸುವತ್ಸರಬಾಹುಲದಶುಚಿ । ಯೊಳಗೆ ಪಾಡ್ಯದ ದಿವಸ ಕೊಪ್ಪಳ ।
ಸುಲಲಿತಗ್ರಾಮದಲಿ ಹರಿಯಮೃತಾಭಿಷೇಕವನು ॥
ಬೆಳೆಸಿದರುವೈಭವದಿನಲ್ಲಿಂ । ತಳರ್ದು ಹರಿಹರ-ರಿತ್ತಿಮುಖ್ಯ ।
ಸ್ಥಳಗಳಂ ದರ್ಶಿಸುತೆ ನಂಜನಗೂಡನೆಯ್ದಿದರು ॥ ॥೪೨॥

ತಾತ್ಪರ್ಯ : ನಳಸಂವತ್ಸರದ ಪಾಡ್ಯದ ದಿನ ಕೊಪ್ಪಳವೆಂಬ ಗ್ರಾಮದಲ್ಲಿ ಅಭಿಷೇಕ-ಪೂಜಾದಿಗಳನ್ನು ಮಾಡಿ ಅಲ್ಲಿಂದ ಹೊರಟು ಹರಿಹರ-ರಿತ್ತಿ ಮುಖಾಂತರ ನಂಜನಗೂಡಿಗೆ ಬಂದು ಸೇರಿದರು.

Rarest Archiver

ಗರಳಪುರಿಯಾಖ್ಯೆಯಲಿ ಮೆರೆಯುವ । ವರದನಂಜನಗೂಡುಪಟ್ಟಣ ।
ಪರಮಗುರುಶ್ರೀರಾಘವೇಂದ್ರರ ಮಠದ ನೆಲೆವನೆಯು ॥
ಗುರುಪರಂಪರೆಯವರನೇಕರ । ಪರಮಪದಬೃಂದಾವನಾಶ್ರಯ ।
ಮರಿಮೆ ಶ್ರೀಕಂಠೇಶ್ವರನು ಭವರೋಗಹರನಲ್ತೇ ॥ ॥೪೩॥

ತಾತ್ಪರ್ಯ : ಗರಳಪುರಿ ಎಂದು ಪ್ರಖ್ಯಾತವಾದ ಮತ್ತು ಪರಮಗುರು ಶ್ರೀರಾಘವೇಂದ್ರರ ಮಠದ ಮೂಲಸ್ಥಳವೆಂದು ಮೆರೆಯುತ್ತಿತ್ತು. ಅಲ್ಲಿ ಪರಂಪರೆಯ ಅನೇಕ ಯತಿಗಳ ಬೃಂದಾವನಗಳಿವೆ. ಅಲ್ಲದೆ, ಅಲ್ಲಿನ ಶ್ರೀಕಂಠೇಶ್ವರಸ್ವಾಮಿಯು "ಭವರೋಗಹರ" ಎಂದು ಪ್ರಸಿದ್ಧನಾದವನು.

ಹೀಗಿರಲು ಪಿಂಗಳದ ವರ್ಷಸ । ರಾಗದಿಂ ಶ್ರೀರಾಮನವಮಿಯ ।
ಸಾಗಮದ ಪಟ್ಟಾಭಿಷೇಕೋತ್ಸವವನಡೆಸಿದರು ॥
ಬೇಗಮಾಧವಮಾಸದಲಿ ಬುಧ । ರಾಗವರ್ಣಾಶ್ರಮದ ಸಲುವಳಿ ।
ಗಾಗಿವಿದ್ವತ್ಸಭೆಯ ನಡೆಯಿಸೆ ಸಜ್ಜುಗೊಳಿಸಿದರು ॥ ॥೪೪॥

ತಾತ್ಪರ್ಯ : ಮುಂದೆ ಪಿಂಗಳನಾಮ ವರ್ಷದ ಶ್ರೀರಾಮನವಮಿಯು ಪ್ರಾಪ್ತವಾಯ್ತು. ಶ್ರೀರಾಮಪಟ್ಟಾಭಿಷೇಕವನ್ನು ಮಾಡಿ ಆ ಸಮಯದಲ್ಲಿ ತ್ರಿಮತಸ್ಥರ ಸಭೆಯನ್ನು ನಡೆಸಲು ಏರ್ಪಾಡು ಮಾಡಿದರು.

ಅತಿಥಿಗೃಹಗಳು ಬಿಡದಿವನೆಗಳ । ವಿತತಸಾಮಗ್ರಿಗಳನಿಬಿಡೀ ।
ಕೃತಮಿರುವ ಉಗ್ರಾಣಗಳು ವರಸಭೆಯ ಮಂಟಪವು ॥
ವಿತರಣದ ಪಾಕಾಲಯಂಗಳು । ಹಿತಕರದ ಮಜ್ಜನಗೃಹಂಗಳು ।
ಮತಿಶಯದೆ ರಚಿತಂಗಳಾದುವು ನೀತಿನಿಯಮದಲಿ ॥ ॥೪೫॥

ತಾತ್ಪರ್ಯ : ವಿದ್ವಾಂಸರ ಸಭೆಗಾಗಿ ಬರುವ ಪಂಡಿತರು, ಅತಿಥಿಗಳಿಗಾಗಿ ಅನೇಕ ಅತಿಥಿಗೃಹಗಳೂ, ಬಿಡದಿ ಮನೆಗಳೂ, ನಾನಾ ಸಾಮಗ್ರಿಗಳಿಂದ ತುಂಬಿದ ಉಗ್ರಾಣಗಳೂ, ಅಡಿಗೆ, ಸ್ನಾನದ ಗೃಹಗಳೂ ಮತ್ತು ಸಭೆ ನಡೆಯುವ ಮಂಟಪ ಇವೆಲ್ಲಾ ರಚಿತವಾದವು.

Rarest Archiver

ಗರಪುರದ ಬೀದಿಗಳು ಮೆಲ್ಲಾ । ವರಪತಾಕಾತೋರಣಾದಿಯಿ ।
ನೆರಡನೆಯ ಸುರನಗರಿಯೋ ಎನೆರಮ್ಯತರಮಾಯ್ತು ॥
ಹರಿಗುರುಗಳರ್ಚನೆಗೆ ಮೆಣ್ಣೂ । ಸುರರ ಸಂತರ್ಪಣೆಗೆ ಮೈಸೂ ।
ರರಸರರಮನೆಯೇ ವಿಧಾಯಕಮಾಯ್ತು ಗುರುಮತದೆ ॥ ॥೪೬॥

ತಾತ್ಪರ್ಯ : ನಂಜನಗೂಡಿನ ಬೀದಿಗಳೆಲ್ಲಾ ತೋರಣ-ಪತಾಕಗಳಿಂದ ಅಲಂಕೃತವಾಗಿ ಎರಡನೆಯ ಸಂತನಗರಿಯೋ ಎಂಬಂತೆ ಮನೋಹರವಾಯಿತು. ಹರಿಗುರುಗಳ ಪೂಜೆಗೆ ಮತ್ತು ಬ್ರಾಹ್ಮಣರ ಸಂತರ್ಪಣೆಗೆ ಮೈಸೂರು ಮಹಾರಾಜರ ಅರಮನೆಯೇ ಸರಿಯಾದ ಸ್ಥಳವೆಂದು ನಿಶ್ಚಯಿಸಲಾಯ್ತು.

ಎತ್ತಲುಂ ಭೂಸುರರ ಕಲಕಲ । ಮೆತ್ತಲುಂ ಶಿಷ್ಯಪ್ರಲಾಪವು ।
ಮೆತ್ತಲು ವಿದ್ವಾಂಸರಾಲಾಪಗಳು ಗೀತೆಗಳು ॥
ಅತ್ತ ತಂಜಾವೂರವಾಲಗ । ಮಿತ್ತ ಮೈಸೂರವರವಾಲಗ ।
ಮೆತ್ತಲುಂ ಗರಪುರಿಯು ಸಂದಣಿಗೊಂಡು ಮೆರೆದಿತ್ತು ॥ ॥೪೭॥

ತಾತ್ಪರ್ಯ : ಆ ಸಮಯದಲ್ಲಿ ಎಲ್ಲಿ ನೋಡಿದರೂ ಅಲ್ಲಿ ವಿದ್ವಾಂಸರ ಗುಂಪುಗಳು, ಅಲ್ಲಲ್ಲಿ ಶಿಷ್ಯರ ಸಮೂಹಗಳ, ಪರಸ್ಪರ ಚರ್ಚೆಯಲ್ಲಿ ತೊಡಗಿದ್ದವು. ಒಂದು ಕಡೆ ತಂಜಾವೂರಿನ ವಾಲಗವೂ, ಮತ್ತೊಂದು ಕಡೆ ಮೈಸೂರಿನವರ ವಾಲಗ, ಹೀಗೆ ಊರಿನಲ್ಲೆಲ್ಲಾ ಸಂಭ್ರಮ ಮೆರೆದಿತ್ತು.

ದೇಶದೇಶಗಳಿಂ ಮತತ್ರಯ । ಶಾಸನದ ಪಂಡಿತರು ವ್ಯಾಕರ ।
ಣಾಶಯರು ಮಾಂತ್ರಿಕರು ತರ್ಕಸುಧಾದಿಶಿಕ್ಷಿತರು ॥
ಭಾಸುರಸುಗಾಯಕರು ವೈಣಿಕ । ರಾಶಯದ ಗಮಕಿಗಳು ಕವಿಗಳು ।
ದಾಸರಧಿಕಾರಿಗಳು ಕರೆಯಿಸಿದರು ಸಭಾಸ್ಥಳಕೆ ॥ ॥೪೮॥

ತಾತ್ಪರ್ಯ : ನಾನಾ ದೇಶಗಳಿಂದ ಬಂದಿದ್ದ ಮತತ್ರಯದ ಪಂಡಿತರು ನಾನಾ ಶಾಸ್ತ್ರಗಳ ಪಂಡಿತರು, ತರ್ಕ, ವೇದಾಂತ, ವ್ಯಾಕರಣ, ಸುಧಾಪಂಡಿತರು, ಪ್ರಸಿದ್ಧಗಾರರು, ವಾದ್ಯಗಾರರು, ಗಮಕಿಗಳೂ, ಕವಿಗಳೂ, ದಾಸವರೇಣ್ಯರು ಮತ್ತು ಸರಕಾರೀ ಅಧಿಕಾರಿಗಳೂ ಆ ಸಭೆಯಲ್ಲಿ ಭಾಗವಹಿಸಿದ್ದರು.

Rarest Archiver

ಶ್ರೀಸುಶೀಲೇಂದ್ರಾಖ್ಯತೀರ್ಥರು । ವಾಸುದೇವಚತುಷ್ಟಯಾತ್ಮಮ ।
ಹೇಶ ಸೀತಾರಾಮಚಂದ್ರನ ಪೂಜೆಮಾಡುತಿರೆ ॥
ಭೂಸುರರ ಶ್ರುತಿಪಠನಮಂಗಳ । ಘೋಷವಾದ್ಯಗಳಿಂದ ಜನರು ।
ಲ್ಲಾಸಗೊಂಡರು ಪರಮದೈವದ ಭಾವಭಕ್ತಿಯಲಿ ॥ ॥೪೯॥

ತಾತ್ಪರ್ಯ : ಗುರುಗಳು ಎಂದಿನಂತೆ ಶ್ರೀಮೂಲರಾಮಚಂದ್ರ ಇತ್ಯಾದಿ ದೇವತಾಮೂರ್ತಿಗಳ ಪೂಜೆಯನ್ನು ನೆರವೇರಿಸಿದರು. ಆ ಸಮಯದಲ್ಲಿ ವೇದಾಧ್ಯಯನ ವಿಶಾರದರಿಂದ ಪಾರಾಯಣ ಮತ್ತು ಮಂಗಳವಾದ್ಯಗಳ ಘೋಷಣೆಗಳಿಂದ ಸೇರಿದ ಜನರೆಲ್ಲರೂ ಭಕ್ತಿಭಾವದಿಂದ ಉಲ್ಲಾಸಗೊಂಡರು.

ಬಳಿಕ ಸುಶೀಲೇಂದ್ರತೀರ್ಥರು । ಸಲಿಸಿದರು ತೀರ್ಥಪ್ರಸಾದವ ।
ನೊಲವಿನಿಂ ಪತ್ತಾರುಸಾವಿರಜನಕೆ ಭೋಜನವ ॥
ಪಲತೆರದದಾನಂಗಳಲಿ ಬಲು । ನಲಿಮೆಯಿಂ ಮಾಳ್ಪನ್ನದಾನವೆ ।
ಇಳೆಯೊಳುತ್ತಮದಾನಮೆನಿಸಿಹುದಲ್ಲೆಬುಧಜನರಿಂ ॥ ॥೫೦॥

ತಾತ್ಪರ್ಯ : ನಂತರ ಹತ್ತಾರು ಸಾವಿರ ಜನಕ್ಕೆ ತೀರ್ಥಪ್ರಸಾದ ಮತ್ತು ಭೂರಿಭೋಜನ ನಡೆಯಿತು. ಎಲ್ಲಾ ದಾನಗಳಿಗಿಂತಲೂ ಒಲವಿನಿಂದ ಕೂಡಿದ ಅನ್ನದಾನವೇ ಶ್ರೇಷ್ಠಕರವಾದುದು ಎಂದು ಅಲ್ಲಿ ಸೇರಿದ್ದ ಪಂಡಿತ-ಪಾಮರರೆಲ್ಲಾ ಕೊಂಡಾಡಿದರು.

ಪುರಬೀದಿಗಳೊಳಗೆ ಗುರುಗಳ । ಮೆರವಣಿಗೆ ಪೊರಮಡಿಸೆ ತೂರ್ಯದ ।
ವರನಿನಾದವಕೇಳ್ದು ಸರ್ವರುಮೊಡನೆ ಕೂಡಿದರು ॥
ಹರಿಯ ಪ್ರೇರಣೆಯಿಂದ ಗುರುಗಳು । ವರಗಜಾರೋಹಣವ ಮಾಡಿದ ।
ರರಳುಹೂಗಳನೆರಚುತಿರ್ದರು ಶಿಷ್ಯಕೂಟಗಳು ॥ ॥೫೧॥

ತಾತ್ಪರ್ಯ : ನಂತರ ಊರಿನ ರಾಜಬೀದಿಗಳಲ್ಲಿ ಶ್ರೀಗಳವರಿಗೆ ಆನೆಯ ಮೇಲಿನ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ನಾನಾ ವಾದ್ಯಗಳು, ಕಹಳೆ-ಕೊಂಬುಗಳಿಂದ ಕೂಡಿ ಸಂಭ್ರಮವಾಗಿತ್ತು. ಉದ್ದಕ್ಕೂ ಊರಿನ ಜನರು, ಭಕ್ತರೂ, ಪರಿವಾರದವರೂ ಶ್ರೀಗಳ ಮೇಲೆ ಅರಳು ಹೂಗಳ ಮಳೆಯನ್ನು ಕರೆಯುತ್ತ ಹೋದರು.

Rarest Archiver

ಮಹಿಸುರಾಧಿಪರಿಂದ ಕಳುಹಿದ । ನಿಹಿತಶಸ್ತ್ರಸಿಪಾಯಿಗಳ ಸಾಲ್ ।
ಸಹಗಜಹಯಾರೋಹಿ ಮೊದಲಹ ರಾಜಮರ್ಯಾದೆ ॥
ಕಹಳೆ ತಮ್ಮಟೆ ತೂರ್ಯವಾದ್ಯವು । ಸಹಿತಡಂಕದಕುದುರೆಮುಂಗಡೆ ।
ಬಹುಳವೈಭವದಿಂದ ಕಂಗೊಳಿಸಿದುದು ಮೆರವಣಿಗೆ ॥ ॥೫೨॥

ತಾತ್ಪರ್ಯ : ಮೈಸೂರು ಮಹಾರಾಜರು ಕಳುಹಿಸಿದ ಕುದುರೆಗಳೂ, ಆನೆಗಳೂ, ಸಿಪಾಯಿಗಳ ಸಾಲೂ, ರಾಜಮರ್ಯಾದೆಗಳೂ, ಕೊಂಬು, ಕಹಳೆ, ತಮ್ಮಟೆ ಮೊದಲಾದ ವಾದ್ಯಗಳೂ ಮೆರವಣಿಗೆಯ ಮುಂದೆ ಸಾಗಿ ರಮ್ಯವಾಗಿತ್ತು.

ಗಜದ ಹಿಂಭಾಗದೊಳು ನಗರ । ಪ್ರಜೆಯಮುಖ್ಯರು ಮಠದಮಾತ್ಯರು ।
ದ್ವಿಜನಿಕಾಯವು ರಾಜಕೀಯೋದ್ಯೋಗಿಗಳು ಸಹಿತ ॥
ವಿಜಯವಿದ್ವಜ್ಜನರು ಶಿಷ್ಯ । ವ್ರಜದೊಡಮೆಮಡೆತಲು ಗುರುಗಳ ।
ರಜತಮಯದಂಬಾರಿಹೊಳೆದುದು ಸೂರ್ಯಬಿಂಬಮೆನೆ ॥ ॥೫೩॥

ತಾತ್ಪರ್ಯ : ಆನೆಯ ಹಿಂಭಾಗದಲ್ಲಿ ನಗರದ ಪ್ರಜಾಪ್ರಮುಖರು, ಮಠದ ದಿವಾನರೂ, ಸರ್ಕಾರಿ ಅಧಿಕಾರಿಗಳೂ, ವಿದ್ವಾಂಸರೂ, ಶಿಷ್ಯರೂ, ಬಾವುಟಗಳು ನಡೆದಿರಲು ಬೆಳ್ಳಿಯ ಅಂಬಾರಿಯ ಸೂರ್ಯನಂತೆ ಹೊಳೆಯಿತು.

ಬೀದಿಗಳ ಮನೆಮನೆಯ ಮುಂಗಡೆ । ಸಾಧುಜನಕುಸುಮಗಳ ವೃಷ್ಟಿಯ ।
ನಾದರಿದಿನೆರಚಿದರು ಗಜದಂಬಾರಿಮೇಲ್ಕಡೆದೆ ॥
ವಾದ್ಯಗಳ ಬಾರಿಸುವ ಕೀರ್ತನ । ವಾದಿಗಳು ನುತಿಗೆಯ್ಯುಚಿರ್ದರು ।
ಪಾದಸೇವಕರಲ್ಲಿಯಲ್ಲಿ ಪರಾಕಹೇಳಿದರು ॥ ॥೫೪॥

ತಾತ್ಪರ್ಯ : ದಾರಿಯುದ್ದಕ್ಕೂ ಪುರಜನರು ಹೂಗಳ ಮಳೆಯನ್ನು ಅಂಬಾರಿಯ ಮೇಲೆ ಸುರಿಸಿದರು. ವಾದ್ಯಗಳ ಸಮೇತ ಸಂಗೀತಗಾರರು ಹಾಡುತ್ತಾ ನಡೆದರು. ಪಾದಸೇವಕರು ಉದ್ದಕ್ಕೂ ಪರಾಕು ಹೇಳುತ್ತಿದ್ದರು.

Rarest Archiver

ಈತೆರನು ಕಡೆವಗಲಿನಾದಿಯೊ । ಳಾತಪಸಿಯುತ್ಸವವು ಹೊರಟುದು ।
ಸಾತಿಶಯಶೃಂಗಾರವೀಧಿಗಳಲ್ಲಿ ಪ್ರೇಕ್ಷಕರ ॥
ಪ್ರೀತಿಯನು ಹೆಚ್ಚಿಸುತೆ ಗುರುಗಳು । ವೀತಿಹೋತ್ರನತೆರದಿ ರಂಜಿಸಿ ।
ಯಾತಪನನಸ್ತಮಯಸಮಯಕೆ ಮಠಸೇರಿದರು ॥ ॥೫೫॥

ತಾತ್ಪರ್ಯ : ಈ ರೀತಿಯಲ್ಲಿ ಕಡೆಯ ದಿನ ಗುರುಗಳ ಮೆರವಣಿಗೆಯು ಶೃಂಗಾರವಾದ ಬೀದಿಗಳಲ್ಲಿ ಹೊರಟು ಪ್ರೇಕ್ಷಕರ ಭಕ್ತಿಯನ್ನು ಹೆಚ್ಚಿಸಿತು. ಶ್ರೀಯವರು ಸೂರ್ಯನು ಮುಳುಗುವ ಹೊತ್ತಿಗೆ ಮಠವನ್ನು ಸೇರಿದರು.

ಶ್ರೀಗಳವರಗಜಾವರೋಹಣ । ಮಾಗುತಿರಲು ಸುಮಂಗಳಾಂಗಿಯ ।
ರಾಗಕದಲಾರತಿಯನೆತ್ತಿದರಿರ್ವರುಂ ಪಾಡಿ ॥
ಆಗ ದರ್ಬಾರ್ಭಕ್ಷಿಯರ ಕರ । ಲಾಘವದಿ ನೊಳಪೊಕ್ಕು ಯತಿಗಳು ।
ಯೋಗ್ಯಪೀಠವನಡರಿದರು ಶುಭವಾದ್ಯಮೊಳಗುತಿರೆ ॥ ॥೫೬॥

ತಾತ್ಪರ್ಯ : ಶ್ರೀಯವರು ಆನೆಯಿಂದ ಕೆಳಗೆ ಇಳಿಯುತ್ತಿರಲು ಸುಮಂಗಲಿಯರು ಅವರಿಗೆ ಆರತಿಯನ್ನು ಬೆಳಗಿದರು. ಮಠದ ಮುಂಬಾಗಿಲ ಬಳಿ ದರ್ಬಾರು ಭಕ್ಷಿಗಳು ಶ್ರೀಗಳಿಗೆ ಹಸ್ತಲಾಘವವನ್ನು ಕೊಟ್ಟು ಒಳಗೆ ಕರೆದುಕೊಂಡು ಹೋಗಿ ಮಂಗಳವಾದ್ಯಗಳು ಮೊಳಗುತ್ತಿರಲು, ಉಚಿತವಾದ ಆಸನದಲ್ಲಿ ಕುಳ್ಳಿರಿಸಿದರು.

ಅಲ್ಲಿ ಶ್ರೀಕಂಠೇಶ್ವರನ ಗುಡಿ । ಯುಲ್ಲಸಿತಗುರುಮಠದ ಪಂಡಿತ ।
ರಲ್ಲದೆಯೆ ದೇಶಾಂತರದ ಬುಧವರ್ಯರೆಸೆದಿರ್ದರ್ ॥
ಇಲ್ಲಿ ಬಲಗಡೆರಾಜವಲ್ಲಭ । ರೆಲ್ಲ ಪದವೀಧರರು ಧನಿಕರು ।
ಸಲ್ಲುವಾಸನಗಳಲ್ಲಿ ಸೇರಿರೆ ಸಭೆಯು ಶೋಭಿಸಿತು ॥ ॥೫೭॥

ತಾತ್ಪರ್ಯ : ಒಳಗೆ ಶ್ರೀಕಂಠೇಶ್ವರನ ಗುಡಿಯ ಪರಿವಾರದವರು, ಶ್ರೀಮಠದ ಪಂಡಿತರೂ, ಶಿಷ್ಯರೂ, ಪಂಡಿತರೂ, ಅರಮನೆಯ ಅಧಿಕಾರಿಗಳೂ, ಧನಿಕರೂ ಉಚಿತ ಆಸನಗಳಲ್ಲಿ ಕುಳಿತು, ಸಭೆಯು ಶೋಭಿಸಿತು.

Rarest Archiver

ಆ ಜನಾಶ್ರಯದಲ್ಲಿ ಸುಪರಿ । ವ್ರಾಜರಿಗೆ ಗುರುನಮನಪೂರ್ವಕ ।
ರಾಜಸನ್ಮಾನವ ಸಮರ್ಪಿಸೆ ರಾಮಕೃಷ್ಣಾಖ್ಯರ್ ॥
ಅಜಿತಾತ್ಮಸುಶೀಲತೀರ್ಥರು । ರಾಜಕಶ್ರೇಯೋಭಿವೃದ್ಧಿಯ ।
ರಾಜ್ಯಜನಸುಕ್ಷೇಮವಂ ಸಹ ಬಯಸಿ ವಚಿಸಿದರು ॥ ॥೫೮॥

ತಾತ್ಪರ್ಯ : ಅರಮನೆಯಿಂದ ಬಂದಿದ್ದ ಅತಿಥಿಗಳು ರಾಜಸನ್ಮಾನವನ್ನು ಗುರುಗಳಿಗೆ ಒಪ್ಪಿಸಿದರು. ಗುರುಗಳು ಮಹಾರಾಜರಿಗೂ, ರಾಜ್ಯದ ಜನತೆಗೂ ಶುಭವನ್ನು ಕೋರಿ ಹಿತವಚನಗಳ ಭಾಷಣವನ್ನು ಮಾಡಿದರು.

ಎಂಬ ಸಂಗತಿ ನಡೆವವೇಳೆಯೊ । ಳಂಬರದೆ ಶಶಿತಾರಕಾಂಶುಗ ।
ಳಿಂಬುಗೊಂಡುವು ಬೆಳಗಿದವು ದೀಪಾಳಿಸಭೆಯಲ್ಲಿ ॥
ಜಂಭಕದಳೀನಾರಿಕೇಳಫ । ಲಾಂಬರಾಕ್ಷತೆಗಳನು ಕೊಟ್ಟರು ।
ದಂಭರಹಿತ ಸುಶೀಲತೀರ್ಥರು ನಿಖಿಲಸಭಿಕರಿಗೆ ॥ ॥೫೯॥

ತಾತ್ಪರ್ಯ : ಆ ಹೊತ್ತಿಗೆ ಕತ್ತಲೆಯಾಗಿ ಆಕಾಶದಲ್ಲಿ ಚಂದ್ರ-ನಕ್ಷತ್ರಾದಿಗಳ ಸಮೂಹವು ದೀಪಾವಳಿಯ ದೀಪಗಳಂತೆ ಹೊಳೆದವು. ಶ್ರೀಗಳು ಎಲ್ಲರಿಗೂ ಮಂತ್ರಾಕ್ಷತೆಯೊಡನೆ ತೆಂಗಿನಕಾಯಿಗಳನ್ನು ಕೊಟ್ಟು ಸನ್ಮಾನಿಸಿದರು.

ಹೀಗೆ ದಿವಸತ್ರಯವು ಸುಕ್ರಮ । ವಾಗಿ ವಿದ್ವಾಂಸರ ಪರೀಕ್ಷೆಯು ।
ಮಾಗಮಸ್ವರ ಮಂತ್ರಪೂರ್ವಕ ದೇವರರ್ಚನೆಯುಂ ॥
ಆಗತಾಖಿಲವಿಪ್ರಭೋಜನ । ಮಾಗಿ ಸಾಯಂ ಮಂಗಳಾರ್ತಿ ಸ ।
ರಾಗಕೀರ್ತನಶಾಸ್ತ್ರ ವಿಷಯಗಳೊಡನೆ ಗಣಿಸಿದುದು ॥ ॥೬೦॥

ತಾತ್ಪರ್ಯ : ಇದೇ ರೀತಿ ಮೂರುದಿನಗಳು ನಿತ್ಯ ವಿದ್ವಾಂಸರ ಚರ್ಚೆ, ಮಂತ್ರ, ವೇದ ಪಾರಾಯಣದೊಡನೆ ದೇವಪೂಜಾ, ನಂತರ ಬ್ರಾಹ್ಮಣ ಸುವಾಸಿನಿಯರಿಗೆ ಭೋಜನ, ಸಾಯಂಕಾಲ ಮಂಗಳಾರತಿ, ಮಂತ್ರಾಕ್ಷತಾ ಪ್ರಸಾದ ವಿನಿಯೋಗ ಹೀಗೆ ನಡೆದವು.

Rarest Archiver

ಕೊನೆಗೆ ವಿದ್ವಾಂಸರಿಗೆ ವಿದ್ಯಾ । ವಿನಯಸಂಪನ್ನರಿಗೆ ರಾಜ ।
ಪ್ರಣಯರಿಗೆ ಗಾಯಕಸುವೈಣಿಕಕೀರ್ತಿಕಾರರಿಗೆ ॥
ಮನದಣಿಯೆ ಸನ್ಮಾನವಿತ್ತರು । ಘನತರದೂರಪ್ರಯಾಣದ ।
ಜನಗಳಿಗೆ ದ್ರವ್ಯಾಧಿಕವಸಹ ಗುರುವರ್ಯರುಚಿತದಲಿ ॥ ॥೬೧॥

ತಾತ್ಪರ್ಯ : ಕೊನೆಗೆ ಶ್ರೀಗಳವರು ಅಲ್ಲಿ ಸೇರಿದ್ದ ವಿದ್ವಾಂಸರುಗಳಿಗೆ, ಸಂಗೀತಗಾರರಿಗೆ, ವಾದ್ಯಕೋವಿದರಿಗೆ, ವಿದ್ಯಾರ್ಥಿ-ಶಿಷ್ಯರುಗಳಿಗೆಲ್ಲಾ ಮನಸ್ಸು ತೃಪ್ತಿಯಾಗುವಂತೆ ದ್ರವ್ಯರೂಪದಲ್ಲಿ ಸಂಭಾವನೆಯನ್ನು ಕೊಟ್ಟರು.

ರಾಘವೇಂದ್ರಕೃಪಾಕಟಾಕ್ಷಸು । ಯೋಗದಿಂದೆ ಸುಶೀಲತೀರ್ಥರು ।
ಸಾಗಿಸಿಯೆ ತಮ್ಮಖಿಳಧರ್ಮಕಲಾಪವನು ಸುಖದೆ ॥
ಶ್ರೀಗರಳಪುರನಾಥನಧಿಕಸ । ರಾಗದಿಂ ದರ್ಶಿಸುತೆ ಸೀತಾ ।
ರಾಘವರ ಚರಣವನು ಭಜಿಸಿದ ರಾಂಜನೇಯರೊಲು ॥ ॥೬೨॥

ತಾತ್ಪರ್ಯ : ಶ್ರೀರಾಘವೇಂದ್ರರ ಅನುಗ್ರಹವಿಶೇಷದಿಂದ ಶ್ರೀಸುಶೀಲೇಂದ್ರರು ಈ ರೀತಿಯಲ್ಲಿ ವೈಭವದಿಂದ ಸಭೆಯನ್ನು ನಡೆಸಿದರು. ನಂತರ ಶ್ರೀನಂಜುಡೇಶ್ವರನ ದರ್ಶನ ಮಾಡಿ ಸೀತಾರಾಮರ ಪಾದಸೇವೆ ಮಾಡಿದ ಆಂಜನೇಯನಂತೆ ಕೃತಾರ್ಥರಾದರು.

ಕೆಲವು ದಿನ ಕಳೆಯುತಿರೆಸದ್ಗುಣ । ನಿಲಯರೆನಿಪ ಸುಶೀಲತೀರ್ಥರು ।
ಜಲಜನಾಭಪ್ರೇರಣೆಯ ದೆಸೆಯಿಂದ ಗರಪುರವ ॥
ತಳರ್ದುಮಂತ್ರಾಲಯದ ಸುತ್ತಣಿ । ಪೊಳಲುಗಳ ಸಂಚರಿಸಿ ದಿಗ್ಜಯ ।
ದೊಲಿಮೆಯಿಂದಾರ್ಜಿಸಿದರಧಿಕಜನಾಭಿಮಾನವನು ॥ ॥೬೩॥

ತಾತ್ಪರ್ಯ : ಕೆಲವು ದಿನಗಳ ನಂತರ ಶ್ರೀಗುರುಗಳು ಹರಿಪ್ರೇರಣೆಯಂತೆ ನಂಜನಗೂಡಿನಿಂದ ಹೊರಟು ಮಂತ್ರಾಲಯದ ಕಡೆಗೆ ಪ್ರಯಾಣ ಮಾಡಿದರು. ಉದ್ದಕ್ಕೂ ಎಲ್ಲಾ ಊರುಗಳಲ್ಲಿಯೂ ಜನರ ಅಭಿಮಾನವನ್ನು ಗಳಿಸಿದರು.

Rarest Archiver

ರಾಮಯೂರೊಳ್ಗದ್ವಾಲೆಯೊ । ಳಾಯವರಿತ ದರದರ ನೆರೆಹೊರೆ ।
ಶ್ರೇಯವನಪೇಕ್ಷಿಸುವ ಕೊಪ್ಪಳ ಯೆಲುಬುರುಗಿಯೊಳಗೆ ॥
ಶ್ರೀಯುತರು ತುಂಬಿರುವ ಬಹುರಮ । ಣೀಯ ಬಾಗಿಲಕೋಟೆ ಬಳ್ಳಾ ।
ರೀಯು ಮದರಾಸೆಂಬ ಪತ್ತನಗಳೊಳು ಮೆರೆದಿರ್ದರ್ ॥ ॥೬೪॥

ತಾತ್ಪರ್ಯ : ದಾರಿಯಲ್ಲಿ ರಾಮಯೂರು (ರಾಯಚೂರು) ಗದ್ವಾಲ, ಕೊಪ್ಪಳ, ಯಲಬುರ್ಗಿ, ಬಾಗಲಕೋಟೆ, ಬಳ್ಳಾರಿ ಮತ್ತು ಮದರಾಸು ಪಟ್ಟಣಗಳಿಗೂ ಭೇಟಿಕೊಟ್ಟರು.

ಈ ಮಹಾಸ್ಥಳಗಳಲಿನಿಲ್ಲುತೆ । ರಾಮನವಮಿಯು ಬಲಿಯಪಾಡ್ಯಮಿ ।
ಶ್ರೀಮದಾಚಾರ್ಯರುಗಳಾರಾಧನೆಯ ಕ್ರಮವರಿತು ॥
ಪ್ರೇಮದಿಂ ಜರಿಗಿಸುತೆ ಶಿಷ್ಯ । ಸ್ತೋಮಕಾಶೀರ್ವದಿಸಿ ದಕ್ಷಿಣ ।
ಭೂಮಿಪಾರ್ಶ್ವದ ಕೊನೆಯ ರಾಮೇಶ್ವರಕೆ ತೆರಳಿದರು ॥ ॥೬೫॥

ತಾತ್ಪರ್ಯ : ಈ ರೀತಿಯಲ್ಲಿ ಸಂಚಾರ ಮಾಡುತ್ತಾ, ಅಲ್ಲಲ್ಲಿ ನಿಲ್ಲುತ್ತಾ, ಶ್ರೀರಾಮನವಮಿ, ಬಲಿಪಾಡ್ಯಮಿ, ಶ್ರೀಮಧ್ವನವಮಿ ಮೊದಲಾದ ಸಮಾರಂಭಗಳನ್ನು ಮಾಡುತ್ತಾ ದಕ್ಷಿಣ ಭಾರತದ ಸಂಚಾರ ಮಾಡಿ ಕೊನೆಗೆ ರಾಮೇಶ್ವರಕ್ಕೆ ತೆರಳಿದರು.

ದಾರಿಯೊಳು ಶ್ರೀಮುಷ್ಣತಿರುಪತಿ । ಸಾರಘಟಿಕಾಚಲವು ಕಂಚಿಯು ।
ಧೀರಮಧರೆಯು ಮೊದಲಹ ಕ್ಷೇತ್ರಂಗಳಲಿ ಸೇರಿ ॥
ಮಾರರಮಣನರ್ಚನೆಯ ಮೂಲಕ । ಭೂರಿಭೂಸುರಭೋಜನವ ಗುಣ ।
ಧೀರಸಂಭಾವನೆಯನಿತ್ತರುದಾರಚಿತ್ತದಲಿ ॥ ॥೬೬॥

ತಾತ್ಪರ್ಯ : ದಾರಿಯಲ್ಲಿ ಶ್ರೀಮುಷ್ಣ, ತಿರುಪತಿ, ಘಟಿಕಾಚಲ, ಕಂಚಿ, ಮಧುರೆ ಇತ್ಯಾದಿ ಕ್ಷೇತ್ರಗಳ ದರ್ಶನಮಾಡಿ, ಉದ್ದಕ್ಕೂ ಭಕ್ತಜನರಿಗೆ, ಶಿಷ್ಯರಿಗೆ ದೇವಪೂಜಾ ಮತ್ತು ಭೂರಿಭೋಜನ ಮಾಡಿಸುತ್ತಾ ಉದಾರತೆಯನ್ನು ಮೆರೆದರು.

Rarest Archiver

ಬಳಿಕ ತಮ್ಮಯ ಗುರುಪರಂಪರೆ । ಯೊಳಗೆ ಗುರು ಸುಮತೀಂದ್ರತೀರ್ಥರ ।
ಸುಲಲಿತಗುರೂಪೇಂದ್ರತೀರ್ಥರ ಪರಮಪದವಿಯನು ॥
ತಿಳಿಹಿಸವ ಬೃಂದಾವನಂಗಳ । ನೆಲೆಯೆನಿಸಿ ಕಾವೇರಿಯಾಪಗೆ ।
ಬಳಸಿರುವ ಶ್ರೀರಂಗಧಾಮಕೆ ಗುರುಗಳೈದಿದರು ॥ ॥೬೭॥

ತಾತ್ಪರ್ಯ : ಮುಂದೆ ತಮ್ಮ ಪರಂಪರೆಯ ಗುರುಗಳಾದ ಯೋಗೀಂದ್ರರು, ಉಪೇಂದ್ರರು, ಸುಮತೀಂದ್ರರ ಬೃಂದಾವನಗಳಿರುವ ಹಾಗೂ ಪವಿತ್ರವಾದ ಶ್ರೀರಂಗನಾಥನ ಸನ್ನಿಧಾನವಿರುವ, ಕಾವೇರಿ ನದಿಯಿಂದ ಆವೃತವಾಗಿರುವ ಶ್ರೀರಂಗಕ್ಷೇತ್ರಕ್ಕೆ ಬಂದು ಸೇರಿದರು.

ಆ ಮಹಾಸ್ಥಳದಲ್ಲಿ ಮನುಜ । ಸ್ತೋಮರಾಪತ್ತೆಂಬುದುತ್ಸವ ।
ಕಾಮದಿಂದೈತಂದು ರಂಗನ ಸೇವೆ ಮಾಡುತಿರೆ ॥
ಸ್ವಾಮಿಗಳು ಶ್ರೀರಂಗದಲ್ಲಿಯೆ । ಪ್ರೇಮದಿಂ ಪದಿನೆಂಟುದಿನಗಳು ।
ರಾಮಪೂಜೆಯ ನಡೆಸಿ ಭೂಸುರಜಗ್ಧಿಗೈಸಿದರು ॥ ॥೬೮॥

ತಾತ್ಪರ್ಯ : ತಮ್ಮ ಪೂರ್ವಿಕರ ಗುರುಗಳ ದರ್ಶನವನ್ನೂ, ಶ್ರೀರಂಗನಾಥನ ದಿವ್ಯದರ್ಶನವನ್ನೂ ಮಾಡುತ್ತಾ ಶ್ರೀಗಳು ಹದಿನೆಂಟು ದಿನಗಳ ಕಾಲ ಶ್ರೀರಂಗದಲ್ಲಿಯೇ ಇದ್ದು ದೇವಪೂಜಾ, ತೀರ್ಥ-ಪ್ರಸಾದಗಳಿಂದ ಶಿಷ್ಯರನ್ನು ಆನಂದಪಡಿಸಿದರು.

ಆಗ ಮಠದಲಿ ಮೃಷ್ಟಭೋಜನ । ಮಾಗುತಿರಲಾದ್ರಾವಿಡರು ಮನು ।
ರಾಗದಿಂದಂ 'ಅನ್ನದಾನಂ ಸಾಮಿ' ಎಂದೆನುತೆ ॥
ಶ್ರೀಗಳವರನು ಪೊಗಳುತಿರೆ ಬಹು । ಜಾಗರೂಕತೆಯಿಂದ ಗುರುಗಳು ।
ರಾಘವೇಂದ್ರರ ನುತಿಸಿ ಹೊರಟರು ಮುಂದೆ ಪಯಣವನು ॥ ॥೬೯॥

ತಾತ್ಪರ್ಯ : ಅಲ್ಲಿನ ದಿನಗಳಲ್ಲಿ ನಡೆಯುತ್ತಿದ್ದ ಮೃಷ್ಟಾನ್ನ ಭೋಜನವನ್ನು ಮಾಡಿ ಅಲ್ಲಿನ ದ್ರಾವಿಡರು (ತಮಿಳರು) ಶ್ರೀಗಳನ್ನು "ಅನ್ನದಾನಂ ಸಾಮಿ" ಎಂದು ಕೊಂಡಾಡುತ್ತಿದ್ದರು. ಅಲ್ಲಿನ ಕಾರ್ಯಕ್ರಮವನ್ನು ಮುಗಿಸಿ ಶ್ರೀಗಳು ಪರಿವಾರದೊಡನೆ ಮುಂದಕ್ಕೆ ಪ್ರಯಾಣ ಮಾಡಿದರು.

Rarest Archiver

ಬಳಿಕ ಮಂತ್ರಾಲಯವಶಿಷ್ಯರು । ಗಳಸಹಿತಸೇರಿದ್ರು ಗುರುಗಳು ।
ತಳಿದರತಿಶಯ ರಾಮಸೇವಾನಂದ ಮಹಿಮೆಯನು ॥
ಉಳಿದುದೊಂದಭಿಲಾಷೆ ಉಡುಪಿಯ । ಕೊಳಲ ಕೃಷ್ಣನ ದರ್ಶನವು ಬೇರೊಂ ।
ದಳಿದಿರುವ ಮೂಲಗುರು ಬೃಂದಾವನದ ಸ್ಥಾಪನೆಯು ॥ ॥೬೦॥

ತಾತ್ಪರ್ಯ : ಕೆಲವು ಕಾಲದ ಪ್ರಯಾಣದ ನಂತರ ಮಂತ್ರಾಲಯ ಕ್ಷೇತ್ರವನ್ನು ಸೇರಿದರು. ಆಗ ಅವರ ಮನಸ್ಸಿನಲ್ಲಿ ಎರಡು ಅಭಿಲಾಷೆಗಳಿದ್ದವು. ಒಂದು ಉಡುಪಿಯ ಶ್ರೀಕೃಷ್ಣನ ದರ್ಶನ, ಎರಡನೆಯದು ಅಲ್ಲಿ ಶ್ರೀರಾಘವೇಂದ್ರರ ಬೃಂದಾವನ ಪ್ರತಿಷ್ಠಾಪನೆ ಮಾಡುವುದು.

ಗುರುತರದ ಕೊರತೆಯನು ತಾವ್ ಪರಿ । ಹರಿಸೆ ಸಂದಿತಕಂಕಣಶ್ರೀ ।
ಗುರುಸುಶೀಲರು ಪಟ್ಟವಹಿಸಿದ ಕೆಲವು ವರುಷದಲಿ ॥
ಪರಮಸಾಹಸದಿಂದ ಕನಕದ । ವರಮಹಾಮಂಟಪವ ಮಾಡಿಸಿ ।
ಭರದೆ ಶ್ರೀರಾಮರನಲಂಕರಿಸಿದರು ವಿಹಿತದಲಿ ॥ ॥೬೧॥

ತಾತ್ಪರ್ಯ : ಈ ಮಧ್ಯೆ ಗುರುಗಳು ಪಟ್ಟವಹಿಸಿದ ಕೆಲವು ವರ್ಷಗಳಲ್ಲೇ ಶ್ರೀರಾಮದೇವರ ಪೂಜೆಗಾಗಿ ಬಂಗಾರದ ಮಂಟಪವನ್ನು ಮಾಡಿಸಿದ್ದರು.

ತಾವು ಪಟ್ಟವ ವಹಿಸಿ ಗಳಿಸಿದ । ರೂಪುಗಳ ಪನ್ನೆರಡುಲಕ್ಷವ ।
ಭಾವುಕ ಶ್ರೀರಾಘವೇಂದ್ರರ ಪಾದಗಾಣಿಕೆಗೆ ॥
ಸೇವಿಸಿದರನ್ಯತ್ರಬಂಧುಜ । ನಾವನದ ದಾಕ್ಷಿಣ್ಯಮಿಲ್ಲದೆ ।
ತಾವು ಸ್ವಾರ್ಥತ್ಯಾಗಿಯೆನಿಸಿದರಖಿಳಸಜ್ಜನರಿಂ ॥ ॥೬೨॥

ತಾತ್ಪರ್ಯ : ತಾವು ತಮ್ಮ ಸಂಚಾರಕಾಲದಲ್ಲಿ ಗಳಿಸಿದ **ಹನ್ನೆರಡು ಲಕ್ಷ ರೂಪಾಯಿಗಳನ್ನು ಶ್ರೀರಾಮ ಪಾದಕಾಣಿಕೆ** ಎಂದು ಸಮರ್ಪಿಸಿದರು. ಎಲ್ಲ ಸಜ್ಜನರಿಂದ ಸ್ವಾರ್ಥತ್ಯಾಗಿ ಎಂದು ಹೆಸರು ಗಳಿಸಿದರು.

Rarest Archiver

ಶ್ರೀಗುರುಸ್ವಾಮಿಗಳು ಮಠದಲಿ । ಗೋಗಣದ ಸೇವಾಭಿವೃದ್ಧಿಯ ।
ರಾಗವನು ತೋರಿಸುತಲಿರ್ದ್ದರು ಕೃಷ್ಣಭಕ್ತಿಯಲಿ ॥
ವೇಗಜಲಪೂರಿತದ ನದಿಯಲಿ । ಸಾಗಿಸಲ್ಕಸ ದಳದಸಮಯದೆ ।
ಗೋಗಣದ ವಿಷಯದಲಿ ತೋರಿದರೆನಿತೊಮರುಕವನು ॥ ॥೭೩॥

ತಾತ್ಪರ್ಯ : ಶ್ರೀಮಠದ ಗೋಸಂಪತ್ತನ್ನು ಅಭಿವೃದ್ಧಿಪಡಿಸಿದರು. ಗೋಶಾಲೆಯನ್ನು ನಿರ್ಮಿಸಿ ಅವುಗಳ ರಕ್ಷಣೆ ಮಾಡಿ ಗೋಗಣದ ವಿಷಯದಲ್ಲಿ ತಮ್ಮ ಕರುಣೆಯನ್ನು ತೋರಿದರು.

ಉಡುಪಿ ಸುಕ್ಷೇತ್ರಕ್ಕೆ ಹೋಗುವ । ದೃಢಮತಿಯ ಸಾಧಿಸಲು ಬೊಕ್ಕಸ ।
ಬಡತನವ ತೋರಿದುದು ಕೃಣನ ಸೇವೆಯುದ್ದಿಶ್ಯ ॥
ಒಡನೆ ಲಕ್ಷಾವಧಿಯ ಧನವನು । ಪಡೆಯಲಿಕೆ ಶ್ರೀರಾಘವೇಂದ್ರರ ।
ದೃಢತರದನುಗ್ರಹವ ಗುರುಗಳು ಬಯಸಿದರು ಮನದೆ ॥ ॥೭೪॥

ತಾತ್ಪರ್ಯ : ಉಡುಪಿ ಕ್ಷೇತ್ರ ದರ್ಶನಕ್ಕೆ ಮಠದ ಪರಿವಾರದೊಡನೆ ಹೋಗಲು ಲಕ್ಷಾಂತರ ರೂಪಾಯಿಗಳ ಅವಶ್ಯಕತೆ ಉಂಟಾಗಿತ್ತು. ಇದಕ್ಕಾಗಿ ಗುರುಗಳು ಶ್ರೀರಾಯರ ಅನುಗ್ರಹವನ್ನು ಬಯಸಿ ಪ್ರಾರ್ಥಿಸಿದರು.

ಈ ಸುಸಂಧಿಯ ಸಮಯದೊಳುಶ್ರೀ । ವಾಸನುಡುಪಿಯಲಷ್ಟಮಠ ಸಂ ।
ನ್ಯಾಸಿಗಳಲಧಮಾರುಮಠ ಯತಿವರರ ಪರ್ಯಾಯಂ ॥
ಭಾಸಮಾಗಿರಲವರು ವಿನಯದೆ । ಶ್ರೀಸುಶೀಲರು ಕೃಷ್ಣದರ್ಶನ ।
ಕೀಸಮಯ ದಯಮಾಡಲಾಮಂತ್ರಣವ ಕಳುಹಿದರು ॥ ॥೭೫॥

ತಾತ್ಪರ್ಯ : ಆ ಸಮಯದಲ್ಲಿ ಉಡುಪಿಯಲ್ಲಿ ಅಧಮಾರು ಮಠದ ಶ್ರೀಗಳು ಪರ್ಯಾಯದಲ್ಲಿದ್ದರು. ಶ್ರೀಹರಿಚಿತ್ತವೋ ಎಂಬಂತೆ ಅಧಮಾರು ಮಠಾಧೀಶರು ಉಡುಪಿಯ ದರ್ಶನಕ್ಕೆ ದಯಮಾಡಿಸಬೇಕೆಂದು ಆಹ್ವಾನವನ್ನು ಬರೆದು ಕಳಿಸಿದರು.

Rarest Archiver

ಆಗ ಶ್ರೀಯವರಿದುವೆಮಂಗಳ । ಭಾಗಧೇಯವು ಎನುತ ಭಾವಿಸಿ ।
ವೇಗದಿಂ ಹುಬ್ಬಳ್ಳಿನಿಕಟಗ್ರಾಮದಲಿ ಸೇರಿ ॥
ಆಗಳಲ್ಲಿನ ಸಭ್ಯಜನಕೆ ಮ । ನೋಗತವಕೈಕೊಳಿಸಿಯವರನು ।
ರಾಗಪೂರ್ವಕ ಹಣವ ಗಳಿಸಿದರುಚಿತರೀತಿಯಲಿ ॥ ॥೭೬॥

ತಾತ್ಪರ್ಯ : ಶ್ರೀಯವರು ಒಳ್ಳೆಯ ಅವಕಾಶ ಉಂಟಾಯ್ತು ಎಂದು ಸಂತಸದಿಂದ ಪರಿವಾರ ಸಮೇತ ಉಡುಪಿಯ ಯಾತ್ರೆಯನ್ನು ಕೈಕೊಂಡರು. ಮೊದಲು ಅಲ್ಲಿಂದ ಹುಬ್ಬಳ್ಳಿಗೆ ಬಂದು ಅಲ್ಲಿನ ಸಜ್ಜನರ ಬೆಂಬಲದಿಂದ ಯಾತ್ರೆಗೆ ಅವಶ್ಯಕವಾದ ಧನವನ್ನು ಉಚಿತ ರೀತಿಯಲ್ಲಿ ಗಳಿಸಿದರು.

ಒಡನೆ ಗುರುಗಳು ರಾಯರಪ್ಪಣೆ । ಪಡೆದು ಕೃಷ್ಣನ ದರ್ಶನಕೆ ತ್ವರೆ ।
ವಡುತೆ ಧಾರ್ವಾಜದ ಸಮೀಪಪ್ರಾಂತ್ಯಸಂಚರಿಸಿ ॥
ಪಡುವಣದ್ರಿಯಸಾಲುಹುಲಿಕ । ಲ್ಕಡಿದು ಘಾಟಿಯ ಮಾರ್ಗಗತಿಯಂ ।
ಪಿಡಿದು ಬ್ರಹ್ಮಾವರದ ಊರನು ಸೇರಿದರು ಭರದೆ ॥ ॥೭೭॥

ತಾತ್ಪರ್ಯ : ನಂತರ ಅಲ್ಲಿಂದ ಗುರುಗಳು ಧಾರವಾಡದ ಸುತ್ತಮುತ್ತಲೂ ಸಂಚರಿಸಿ ಅಲ್ಲಿಂದ ಪಶ್ಚಿಮದ ಪರ್ವತಶ್ರೇಣಿಯ ಹುಲಿಕಲ್ ಘಾಟಿಯ ಮಾರ್ಗವಾಗಿ ಬ್ರಹ್ಮಾವರವನ್ನು ಸೇರಿದರು.

ಅಲ್ಲಿ ದೇವರ ಪೂಜೆ ಮೊದಲಾ । ಗೆಲ್ಲವಂ ನೆರವೇರಿಸಿದ ಬಳಿ ।
ಕಲ್ಲಿ ಪಯಣವ ಹೊರಟು ಕಡಿಯಾಳಮ್ಮನಾಲಯದೆ ॥
ಸಲ್ಲಲಿತವಸತಿಯಲಿ ವಸತಿಯ । ನೆಲ್ಲಪರಿಜನರೊಡನೆ ಕಳೆದರು ।
ಪುಲ್ಲಲೋಚನ ಕೃಷ್ಣದರ್ಶನಗೆಯ್ವಕಾಂಕ್ಷೆಯಲಿ ॥ ॥೭೮॥

ತಾತ್ಪರ್ಯ : ಅಲ್ಲಿ ದೇವಪೂಜಾ ಮುಗಿಸಿಕೊಂಡು ಕಟಿಯಾಲ್‌ನಲ್ಲಿ ದೇವಿಯ ದರ್ಶನ ಮಾಡಿ, ಶ್ರೀಕೃಷ್ಣದರ್ಶನ ಮಾಡುವ ನಿರೀಕ್ಷೆಯಲ್ಲಿ ಆ ದಿನ ಅಲ್ಲೇ ತಂಗಿದರು.

Rarest Archiver

ಮರುದಿವಸಮಾವಸತಿಯಲಿ ಸಿರಿ । ಯರಸನರ್ಚನೆ ವಿಪ್ರಭೋಜನ ।
ಮೆರೆದುದಾಪರ್ಯಾಯ ಯತಿಗಳ ದಿವ್ಯಸತ್ಕೃತಿಯಿಂ ॥
ತರಣಿಯುವರೋಹಣದ ಕಡೆಯಲಿ । ನೆರೆದು ಹಾಸ್ತ್ಯಶ್ವಪದಗಳವು ।
ಬಿರುದುವಾದ್ಯಗಳೆಲ್ಲ ಗುರುಗಳ ಮುಂದಣವಸರಕೆ ॥ ॥೭೯॥

ತಾತ್ಪರ್ಯ : ಮರುದಿವಸ ಆ ಬೀಡಾರದಲ್ಲಿ ಶ್ರೀರಾಮದೇವರ ಅರ್ಚನೆ, ಎಲ್ಲರ ಭೋಜನಕ್ಕೂ ಪರ್ಯಾಯ ಮಠಾಧೀಶರು ಸಕಲ ಏರ್ಪಾಡುಗಳನ್ನು ಮಾಡಿದ್ದರು. ಮರುದಿನ ಬೆಳಿಗ್ಗೆ ಸೂರ್ಯೋದಯದ ಹೊತ್ತಿಗೆ ಆನೆ, ಕುದುರೆಗಳು, ವಾದ್ಯಗಳು, ಬಿರುದುಗಳ ಸಮೇತ ಗುರುಗಳು ಉಡುಪಿಯ ಕಡೆಗೆ ಪ್ರಯಾಣ ಮಾಡಲು ಸಿದ್ಧರಾದರು.

ಅತ್ತಕಡೆ ಪರ್ಯಾಯಮಠ ಸ । ದ್ವೃತ್ತಯತಿಗಳು ಪುಷ್ಪಫಲಸಂ ।
ಪತ್ತಿಹಯಗಜಬಿರುದು ಮಂಗಳವಾದ್ಯಮೊದಲಾದ ॥
ಮೊತ್ತದಿಂ ಲೌಕಿಕಸುವೈದಿಕ । ಭೃತ್ಯರಿಂ ಜತೆಗೊಳಿಸಿಮುಖ್ಯಾ ।
ಮಾತ್ಯವೆಂಕೋಬಾಖ್ಯರಂ ಕಳುಹಿದರು ಕರೆತರಲು ॥ ॥೮೦॥

ತಾತ್ಪರ್ಯ : ಆ ಕಡೆ ಪರ್ಯಾಯ ಮಠಾಧೀಶರು ಶ್ರೀಗಳವರನ್ನು ಎದುರುಗೊಳ್ಳಲು, ಲೌಕಿಕ-ವೈದಿಕ ಜನರನ್ನೂ, ಆನೆ-ಕುದುರೆ, ವಾದ್ಯಗಳೊಡನೆ ಮುಖ್ಯ ಅಮಾತ್ಯರಾದ ವೆಂಕೋಬರಾಯರು ಎಂಬುವರನ್ನು ಕಳಿಸಿದರು.

ಈಪರಿಯೊಳಾಮೆರೆತನಡೆತಂ । ದಾಪರಮಗುರುಚರಣಕೆರಗಲು ।
ತಾಪಸರು ಶ್ರೀರಾಮದೇವರ ಪೆಟ್ಟಿಗೆಯು ಮುಂದೆ ॥
ಪೋಪವೊಲುಕ್ರಮುಪಡಿಸಿ ದೇವಿಯ । ಶ್ರೀಪದಕೆ ವಂದಿಸುತಮುಡುಪಿಯ ।
ಶ್ರೀಪುರದ ಕಡೆಹೊರಟು ನಡೆದರು ಸಕಲವಿಭವದಲಿ ॥ ॥೮೧॥

ತಾತ್ಪರ್ಯ : ಅವರುಗಳು ಬಂದು ಶ್ರೀಯವರಿಗೆ ನಮಸ್ಕರಿಸಿ ನಿಂತಿರಲು, ಗುರುಗಳು ದೇವಿಯ ಶ್ರೀಪಾದಕೆ ನಮಸ್ಕರಿಸಿ, ಶ್ರೀರಾಮದೇವರ ಪೆಟ್ಟಿಗೆಯನ್ನು ಮುಂದು ಮಾಡಿಕೊಂಡು, ಸಕಲ ವೈಭವದಿಂದ ಉಡುಪಿಯ ಕಡೆಗೆ ಹೊರಟರು.

Rarest Archiver

ಉಡುಪಿಕೃಷ್ಣನ ಹೊನ್ನುಪಾಲಕಿ । ನಡುವೆ ರಾಮರನಿರಿಸಿ ಮೇಣಾ ।
ಉಡುಪಿಸದ್ಯೋಮಠದ ಪಾಲಕಿಯೊಳಗೆ ಗುರುವರರು ॥
ಮೃಡನವೊಲು ಮಂಡಿಸಿರೆ ಪರಜನ । ರೊಡನೆ ಮೆರೆವಾವುತ್ಸವದ ಕಡು ।
ಸಡಗರವನೇನೆಂಬೆ ನದ್ಭುತವಾಯ್ತು ವಹಿಲದಲಿ ॥ ॥೮೨॥

ತಾತ್ಪರ್ಯ : ಶ್ರೀಕೃಷ್ಣನ ಚಿನ್ನದ ಪಲ್ಲಕ್ಕಿಯಲ್ಲಿ ಶ್ರೀರಾಮದೇವರನ್ನು ಕೂಡಿಸಿ, ಉಡುಪಿಯ ಮಠದ ಪಲ್ಲಕ್ಕಿಯಲ್ಲಿ ಶ್ರೀಗಳವರು ಕುಳಿತು ಸಡಗರದ ಮೆರವಣಿಗೆ ಅದ್ಭುತವಾಯ್ತು.

ಆನೆಕುದುರೆಗಳೊಂಟೆಕಾಲಾ । ಳಾನಿಸಿದ ಧ್ವಜಚಾಮರಂಗಳು
ಮಾನಕಾದಿಸುವಾದ್ಯಘೋಷಗಳೈದೆ ಸಂಭ್ರಮಿಸೆ ॥
ಮಾನಪದವೀಧರಗೃಹಸ್ಥರು । ಸಾನುರಾಗದಿ ನೊಡನೆ ಬರುತಿರೆ ।
ಮೌನಿಗಳುರವಿಯವೊಲು ಕಂಗೊಳಿಸಿದರು ತೇಜದಲಿ ॥ ॥೮೩॥

ತಾತ್ಪರ್ಯ : ಮೆರವಣಿಗೆಯಲ್ಲಿ ಆನೆ, ಕುದುರೆಗಳು, ಕಾಲಾಳುಗಳು, ಧ್ವಜ-ಚಾಮರಗಳು, ವಿಶೇಷವಾದ ವಾದ್ಯಘೋಷಗಳು, ಜೊತೆಗೆ ಊರಿನ ಗೃಹಸ್ಥರು, ಪಂಡಿತರೊಡನೆ ನಡೆದುಬಂದರು. ಇಂತಹ ಮೆರವಣಿಗೆಯಲ್ಲಿ ಸುಶೀಲೇಂದ್ರರು ತೇಜಸ್ಸಿನಿಂದ ಪ್ರಕಾಶಿಸಿದರು.

ಸಂಜೆ ಗೋಧೂಳಿಯ ಸುಲಗ್ನದೆ । ಕುಂಜುಬೆಟ್ಟದ ಮಾರ್ಗ ಉಡುಪಿಯ ।
ಮಂಜುನಗರಿಯ ಗುರುಸುಶೀಲರು ಪೊಕ್ಕು ಬರುತಿರಲು ॥
ಕಂಜನಾಭನ ಮೇಲೆ ಸೂಸುವ । ಮಂಜುಲಾಜಾವೃಷ್ಟಿನೋಡಲು ।
ರಂಜಿಸಿತು ರಾಜಪಥ ಬೆಳ್ಮಡೆ ಮಡಿಯಹಾಸಿದವೋಲ್ ॥ ॥೮೪॥

ತಾತ್ಪರ್ಯ : ಸಾಯಂಕಾಲ ಗೋಧೂಳಿ ಲಗ್ನದಲ್ಲಿ ಶ್ರೀಗಳು ಕುಂಜುಬೆಟ್ಟದ ಮಾರ್ಗವಾಗಿ ಉಡುಪಿ ನಗರವನ್ನು ಪ್ರವೇಶಿಸಿದರು.

Rarest Archiver

ಯತಿಸುಶೀಲರು ತೇರಬೀದಿಯ । ಪಥದೆ ಪಾಲಕಿಯಿಳಿದು ವಿಪ್ರರು ।
ಶ್ರುತಿಯ ಘೋಷಿಸೆ ಸಚಿವವೆಂಕೋಬಾರ್ಯ ಪಂಡಿತರ ॥
ವಿತತಕರಲಾಘವದ ಮೇಣಾ । ಗತದ ಕೈದೀವಟಿಯ ಬೆಳಕಿಂ ।
ಪಥವನಡೆದರು ಪಾದಚಾರಿಗಳಾಗಿ ಮುದದಿಂದ ॥ ॥೮೫॥

ತಾತ್ಪರ್ಯ : ಮೆರವಣಿಗೆ ತೇರಬೀದಿಯನ್ನು ಸೇರಿತು. ಅಲ್ಲಿ ಶ್ರೀಗಳು ಪಲ್ಲಕ್ಕಿಯಿಂದ ಇಳಿದು, ವೈದಿಕರು ವೇದಪಾರಾಯಣ ಮಾಡುತ್ತಿರಲು, ವಾದ್ಯಗಳು ಘೋಷಿಸುತ್ತಿರಲು, ಶ್ರೀವೆಂಕೋಬರಾಯರ ಹಸ್ತಲಾಘವವನ್ನು ಹಿಡಿದು ಶ್ರೀಗಳು ಕೈದೀವಟಿಗೆಯ ಬೆಳಕಿನಲ್ಲಿ ಹರ್ಷದಿಂದ ಪಾದಚಾರಿಗಳಾಗಿ ನಡೆತಂದರು.

ಮೊದಲುತಾವ್ ಮುತ್ತಜ್ಜನಂತಿಹ । ಸದಯಶಂಕರ ಚಂದ್ರಮೌಳಿಯ ।
ಬುಧರಿಗಜ್ಜನವೊಲಿಹನಂತೇಶ್ವರನ ದರ್ಶನವ ॥
ವಿದಿತಮಧ್ವಾಚಾರ್ಯರಾನಂ । ದದಲಿ ಶಿಷ್ಯರ ಪಾಠಹೇಳಿದ ।
ಸದಮಲಸ್ಥಳಪೂಜೆಯಂಸಹ ಮಾಡಿದರು ನಲಿದು ॥ ॥೮೬॥

ತಾತ್ಪರ್ಯ : ಮೊದಲು ಶ್ರೀಚಂದ್ರಮೌಳೀಶ್ವರ ದೇವಸ್ಥಾನಕ್ಕೂ, ಅನಂತರ ಸ್ರೀಅನೇತೇಶ್ವರ ದೇವಸ್ಥಾನಕ್ಕೂ ಭೇಟಿಕೊಟ್ಟು ದೇವರ ದರ್ಶನ ಮಾಡಿದರು. ಅಲ್ಲಿಯೇ ಶ್ರೀಮಧ್ವಾಚಾರ್ಯರು ಶಿಷ್ಯರಿಗೆ ಪಾಠ ಹೇಳುತ್ತಿದ್ದ ಜಾಗವನ್ನು ಪೂಜಿಸಿದರು.

ಅನಿತರಲಿ ಪರ್ಯಾಯ ಯತಿಗಳು । ಘನತೆಯಲಿ ನಡೆತಂದು ಸಂಧಿಸಿ ।
ವಿನುತರಾಮರ ನಮಿಸಿ ಪುಷ್ಪಗಳೆರಚಿದರು ಬಳಿಕ ॥
ವಿನಯವಚನದೆ ಗುರುಗಳಿಬ್ಬರು । ತನುವನಾಲಿಂಗಿಸುತೆ ಮೆರೆದಿರೆ ।
ಘನಪುಳಕದುಬ್ಬಿನಲಿ ತೊರಿದರಲ್ಲಿ ನೋಟಕರು ॥ ॥೮೭॥

ತಾತ್ಪರ್ಯ : ಆ ಹೊತ್ತಿಗೆ ಪರ್ಯಾಯ ಮಠಾಧೀಶರು ಅಲ್ಲಿಗೆ ನಡೆದುಬಂದು ಶ್ರೀಗಳನ್ನು ಭೇಟಿಮಾಡಿದರು. ಶ್ರೀರಾಮದೇವರ ಪೆಟ್ಟಿಗೆಗೆ ಹೂಗಳನ್ನು ಏರಿಸಿ ನಮಸ್ಕರಿಸಿದರು. ಅನಂತರ ಇಬ್ಬರು ಯತಿಗಲು ಪರಸ್ಪರ ಆಲಂಗಿಸಿದರು. ಈ ದೃಶ್ಯವನ್ನು ನೋಡಿ ಅಲ್ಲಿ ನೆರೆದಿದ್ದ ಜನರು ಆನಂದಿಸಿದರು.

Rarest Archiver

ಆಗ ಮಹದಾನಂದತುಂದಿಲ । ರಾಘವೇಂದ್ರರು ಕನಕನಾಣ್ಯಗ ।
ಳೋಘವೆರಚಿದರವರ ದಿಗ್ವಿಯಧನವ ಸೂಚಿಪವೊಲ್ ॥
ಸಾಗಿಬಂದಾಮಧ್ವಸರಸಿಯ । ನಾಗತೀರ್ಥವ ಧರಿಸಿ ಶೀರ್ಷದೊ ।
ಳಾಗುಡಿಯ ಸಾಲಾಂತರಾಳವ ಬಳಸಿದರು ನಲಿದು ॥ ॥೮೮॥

ತಾತ್ಪರ್ಯ : ಮುಂದೆ ಶ್ರೀಗಳು ಮಧ್ವಸರೋವರಕ್ಕೆ ಬಂದು ಅಲ್ಲಿನ ನೀರನ್ನು ತಲೆಗೆ ಪ್ರೋಕ್ಷಣೆ ಮಾಡಿಕೊಂಡು ಶ್ರೀಕೃಷ್ಣ ಮಂದಿರವನ್ನು ಪ್ರವೇಶಿಸಿದರು.

ಮುಂದೆ ಮುಖಮಂಟಪದೆಕಟ್ಟಿದ । ಸುಂದರದ ತೊಟ್ಟಿಲಲಿ ರಾಮರ ।
ನಿಂದಿರಿಸಿ ಪರಮಾತ್ಮಕೃಷ್ಣನ ಪ್ರಥಮದರ್ಶನವ ॥
ಅಂದು ಕನಕನ ಕಂಡಿಯಿಂದಲೆ । ಸಂಧಿಸಿಯೆ ನುತಿಸುತ್ತ ಕಾಂಚನ ।
ಬೃಂದಮಂಸಲಿಸಿದರು ಕೃಷ್ಣನ ಸೇವೆಯರ್ಥದಲಿ ॥ ॥೮೯॥

ತಾತ್ಪರ್ಯ : ನಂತರ ಗುಡಿಯ ಮುಖಮಂಟಪದಲ್ಲಿ ಕಟ್ಟಿದ ಸುಂದರವಾದ ತೊಟ್ಟಿಲಲ್ಲಿ ಶ್ರೀರಾಮನನ್ನು ಕೂಡಿಸಿ, ಪರಮಾತ್ಮ ಶ್ರೀಕೃಷ್ಣನ ಪ್ರಥಮ ದರ್ಶನವನ್ನು ಅಂದು ಕನಕನ ಕಿಂಡಿಯಿಂದಲೇ ಮಾಡಿ ಕಾಣಿಕೆಯನ್ನು ಅರ್ಪಿಸಿ ಧನ್ಯರಾದರು.

ಮತ್ತೆ ಸಂಧ್ಯಾಪೂಜೆ ಮೊದಲಹ । ನಿತ್ಯಸೇವೆಯ ನೋಡಿ ಗುರುವರ ।
ರುತ್ತಮೋಪನ್ಯಾಸಮೂಲಕ ತಿಳಿಸಿ ಸನ್ಮತವ ॥
ಇತ್ತಕಡೆ ಆರ್ಕಾಟುಮಠವೆಂ । ಬುತ್ತಮಶ್ರೀರಾಘವೇಂದ್ರರ ।
ಸಜ್ಜಮಠದಲಿ ಕನಕವೃಷ್ಟಿಯ ಸೂಸಿದರು ವಿಹಿತಂ ॥ ॥೯೦॥

ಬಳಿಕ ಗುರುಸೇವಾರ್ಥ ಸೌಮಂ । ಗಲಿಯರಾರತಿ ಯೆತ್ತಿದರು ಜನ ।
ಕುಲವು ನಮಿಸಿತು ಮೂಲರಾಮರ ಸಹಿತ ಗುರುಗಳಿಗೆ ॥
ಸುಲಭದಿಂದಾಗುರುವರೇಣ್ಯರು । ಫಲವಮಂತ್ರಾಕ್ಷತೆಯನವರಿಗೆ ।
ಸಲಿಸಿ ವಿಶ್ರಮಗೊಂಡರಾಮಠಸೌಧನಿಲಯದಲಿ ॥ ॥೯೧॥

ತಾತ್ಪರ್ಯ : ಶ್ರೀಕೃಷ್ಣನಿಗೆ ಪರ್ಯಾಯ ಮಠಾಧೀಶರು ಮಾಡುವ ಸಂಧ್ಯಾಪೂಜೆಯನ್ನು ನೋಡಿ ಆನಂದಿಸಿದರು. ಅಲ್ಲಿ ಸೇರಿದ್ದ ಭಕ್ತರೆದುರಿಗೆ ಶ್ರೀಕೃಷ್ಣನ ದರ್ಶನದಿಂದ ತಮಗಾದ ಆನಂದವನ್ನು ಸಣ್ಣ ಉಪನ್ಯಾಸರೂಪದಲ್ಲಿ ಹೇಳಿದರು. ಬಳಿಕ ಶ್ರೀಗಳಿಗೆ ಸುಮಂಗಲಿಯರು ಆರತಿಯನ್ನು ಬೆಳಗಿದರು. ಎಲ್ಲರೂ ಮೂಲರಾಮರಿಗೂ ಗುರುಗಳಿಗೂ ನಮಸ್ಕರಿಸಿದರು. ಎಲ್ಲರಿಗೂ ಗುರುಗಳು ಫಲಮಂತ್ರಾಕ್ಷತೆಯನ್ನು ಕೊಟ್ಟು ಮಠದ ಸೌಧದಲ್ಲಿ ವಿಶ್ರಾಂತಿ ಪಡೆದರು.

Rarest Archiver

ಶ್ರೀಸುಶೀಲರು ಕ್ರೋಧನಾಬ್ದದ । ಪೌಷಶುಕ್ಲದ ಪೂರ್ಣಿಮಾದಿನ ।
ಶ್ರೀಸುರೋತ್ತಮ ಕೃಷ್ಣದರ್ಶನಗೆಯ್ದರುಡುಪಿಯಲಿ ॥
ವಾಸವನು ಮಾಡುತ್ತ ಕೆಲದಿನ । ಶ್ರೀಶಸೇವೆಯ ನಡೆಸಿ ಮಠದಲಿ ।
ಭಾಸುರದಶ್ರೀರಾಘವೇಂದ್ರರ ಪದವ ನಿಲಿಸಿದರು ॥ ॥೯೨॥

ತಾತ್ಪರ್ಯ : ಹೀಗೆ ಕ್ರೋಧನಸಂವತ್ಸರದ ಪುಷ್ಯ ಪೂರ್ಣಿಮಾ ದಿವಸ ಶ್ರೀಕೃಷ್ಣನ ದರ್ಶನ ಮಾಡಿದರು. ಹಲವಾರು ದಿನಗಳು ಉಡುಪಿಯಲ್ಲಿದ್ದು ಶ್ರೀಕೃಷ್ಣನ ಸೇವೆ ಮಾಡಿದರು. ಅದೇ ಸಮಯದಲ್ಲಿ ಉಡುಪಿಯಲ್ಲಿ ಶ್ರೀರಾಘವೇಂದ್ರರ ಮೃತ್ತಿಕಾ ಬೃಂದಾವನವನ್ನು ಪ್ರತಿಷ್ಠಾಪಿಸಿದರು.

ಉಡುಪಿಯಲಿ ಶ್ರೀಕೃಷ್ಣದೇವರಿ । ಗೊಡವೆ ಗೊಸುಗಮೂರುಸಾಸಿರ ।
ಮೊಡನೆ ಕನಕಮಹಾಭಿಷೇಕಕೆ ಮೂರುಸಾಸಿರವು ॥
ಬಿಡದೆ ಸಪ್ತಕ್ಷಣದೆಗಳಪರಿ । ವಿಡಿಯಕ್ಷಣಗಳಿಗೇಳುಸಾಸಿರ ।
ಕಡೆಗೆ ಸಂಸ್ಕೃತಪಾಠಶಾಲೆಗದೊಂದುಸಾಸಿರವು ॥ ॥೯೩॥

ತಾತ್ಪರ್ಯ : ಶ್ರೀಕೃಷ್ಣನಿಗೆ ಒಡವೆಗಾಗಿ ಮೂರು ಸಾವಿರ, ಕನಕ ಮಹಾಭಿಷೇಕಕ್ಕೆ ಮೂರು ಸಾವಿರ, ಸಂಸ್ಕೃತ ಪಾಠಶಾಲೆಗೆ ಒಂದು ಸಾವಿರ ರೂಗಳನ್ನು ಕೊಡಿಸಿದರು.

ಅಷ್ಟಸಂಖ್ಯಾಮಠದ ಯತಿಗಳ । ಇಷ್ಟಿಯಾಮಂತ್ರಣದ ಕೆಲಸ ।
ಕ್ಕಷ್ಟೆಯಲ್ಲದೆ ಅವರ ಬಹುಮತಿಗೆಂಟುಸಾಸಿರವು ॥
ಶಿಷ್ಟವಿದ್ವಜ್ಜನರಬಹುಮಾ । ನೇಷ್ಟಮಿತ್ರರ ಕಾರ್ಯಸಿದ್ಧಿಗೆ ।
ಯಷ್ಟಸಂಖ್ಯೆಯ ಸಾಸಿರದರೂಪ್ಯಗಳು ಸಲಿಸಿದುವು ॥ ॥೯೪॥

ತಾತ್ಪರ್ಯ : ಅಲ್ಲದೆ, ಅಷ್ಟಮಠಗಳಿಗೂ ಪೂಜೆಗಾಗಿ ಎಂಟು ಸಾವಿರ ಮತ್ತು ಅಲ್ಲಿನ ವಿದ್ವಾಂಸರಿಗೆ ಬಹುಮಾನವಾಗಿ ಎಂಟು ಸಾವಿರ ರೂಗಳು ಸಂದಾಯವಾಯ್ತು.

Rarest Archiver

ಇದರಮೇಲಿನ್ನೆನಿತುದ್ರವ್ಯವ । ನೊದವಿಸಲು ಬೇಕಾಯ್ತೋ ಎಣಿಕೆಯ ।
ನೊದವಿಸುವರಾರುಂಟು? ಸರ್ವವು ದೈವತಂತ್ರವಲಾ ॥
ಪದುಮನಾಭನ ಕೃಪೆಯಿರಲು ಸಂ । ಪದಕೆ ಕೊರತೆಯೆ? ಸೊಗಸಿತೆಲ್ಲವು ।
ಸದಯಗುರುಗಳದೆಂ ಮಹಾತ್ಮರೋ ಎಂದರಖಿಳಜನ ॥ ॥೯೫॥

ತಾತ್ಪರ್ಯ : ಇದರ ಮೇಲೆ ಶ್ರೀಮಠದ ಯಾತ್ರೆಗಾಗಿ ಎಷ್ಟು ಖರ್ಚಾಯಿತೋ, ಏನೋ ತಿಳಿದವರಾರು? ಎಲ್ಲವೂ ಆ ದೈವತಂತ್ರವಲ್ಲವೆ? ಶ್ರೀಪದುಮನಾಭನ ಕೃಪೆ ಒಂದಿದ್ದರೆ ಸಂಪತ್ತಿಗೆ ಏನು ಕೊರತೆ? ಎಲ್ಲವೂ ಸಾಂಗವಾಗಿ ವೈಭವದಿಂದ ನಡೆಯಿತು. ಶ್ರೀಗುರುಗಳು ಎಂತಹ ಮಹಾತ್ಮರೋ ಎಂದು ಎಲ್ಲರೂ ಕೊಂಡಾಡಿದರು.

ಗುರುಸುಶೀಲರು ದಂಭವಿಲ್ಲದೆ । ಪರಮಸತ್ಕಾರ್ಯಗಳನೆಸಗುತ ।
ಹರಿಸಮರ್ಪಣೆಗೆಯ್ದು ಭೂಸುರಭೂರಿಭೋಜನವ ॥
ಹರುಷದಿಂ ಮಾಡಿಸುತೆ ವಿದ್ವ । ನ್ನರರಿಗುಚಿತದ್ರವ್ಯವಿತ್ತರು ।
ಗುರುಗಳೌದಾರ್ಯಗುಣಕೃಷ್ಣನ ಮಹಿಮೆಯಿಂದಲ್ತೆ ॥ ॥೯೬॥

ತಾತ್ಪರ್ಯ : ಉಡುಪಿಯಲ್ಲಿ ಇರುವವರೆಗೂ ದಿನವೂ ದೇವಪೂಜಾ, ಬ್ರಾಹ್ಮಣ ಸುಹಾಸಿನಿಯರಿಗೆ ಭೂರಿಭೋಜನ ಮಾಡಿಸುತ್ತಾ, ವಿದ್ವಾಂಸರುಗಳಿಗೆ ಉದಾರವಾಗಿ ಸ್ಥಂಭಾವನೆಯನ್ನು ಕೊಡುತ್ತಾ ಎಲ್ಲವನ್ನೂ ಹರಿಸಮರ್ಪಣೆ ಮಾಡಿದರು.

ಇಂತು ಗುರುವರರಮರಕೀರ್ತಿಯ । ನಾಂತುಪಂಡಿತರೊಡನೆ ಮತ ಸಿ ।
ದ್ಧಾಂತಧರ್ಮವಬೋಧಿಸುತ ಸಭೆಯಲ್ಲಿ ಸರ್ವರಿಗೆ ॥
ಸಂತಸದೆ ಬಹುಮಾನಫಲಗಳ । ಮಂತ್ರಪುಷ್ಪಾಕ್ಷತೆಯ ಸಹ ಬಹು ।
ಶಾಂತವಚನದಿ ನಿತ್ತವರ ಕಳುಹಿದರು ವಿನಯದಲಿ ॥ ॥೯೭॥

ತಾತ್ಪರ್ಯ : ಈ ರೀತಿಯಾಗಿ ಶ್ರೀಗಳು ಅಮರ ಕೀರ್ತಿಯನ್ನು ಪಡೆದರು. ಪಂಡಿತರ ಸಭೆ ಸೇರಿಸಿ ದ್ವೈತಸಿದ್ಧಾಂತವನ್ನು ಬೋಧಿಸುತ್ತಾ ಸರ್ವರಿಗೂ ಮಂತ್ರಾಕ್ಷತೆ ಪ್ರಸಾದದೊಡನೆ ಸಂಭಾವನೆಯನ್ನು ಕೊಟ್ಟು ಎಲ್ಲರೊಡನೆಯೂ ವಿನಯದಿಂದ ವರ್ತಿಸಿದರು.

Rarest Archiver

ಶ್ರೀಗುರುಗಳುಡುಪಿಯಲಿ ಸಮರಸ । ವಾಗಿರುವ ತನಕಷ್ಟಮಠಗುರು ।
ಯೋಗಿಗಳಿಗಾಮಂತ್ರಣ ಪ್ರತಿಗೌರವಗಳೊಡನೆ ॥
ಭೋಗಿಮುರಳೀಧರನಸೇವೆ । ಸರಾಗಮಾಗಿಯೆ ನಡೆದು ಉಡುಪಿಯ ।
ಯೋಗತೀರ್ಥಂಗಳನು ನೋಡಿದರಮಲಕುತುಕದಲಿ ॥ ॥೯೮॥

ತಾತ್ಪರ್ಯ : ಶ್ರೀಗುರುಗಳು ಉಡುಪಿಯ ಎಂಟು ಮಠಗಳ ಯತಿಗಳೊಡನೆಯೂ ಸೌಹಾರ್ದದಿಂದಿದ್ದು ಅವರೆಲ್ಲರಿಗೂ ಮಂತ್ರಾಲಯಕ್ಕೆ ದರ್ಶನಕ್ಕೆ ಬರಬೇಕಾಗಿ ವಿನಯದಿಂದ ಆಮಂತ್ರಣವನ್ನು ಕೊಟ್ಟು, ಸುತ್ತಮುತ್ತಲಿನ ತೀರ್ಥಗಳನ್ನೂ ಕ್ಷೇತ್ರಗಳನ್ನು ದರ್ಶಿಸಿದರು.

ಒಡನೆ ಗುರುಗಳು ಕೃಷ್ಣನಪ್ಪಣೆ । ಪಡೆದು ಪರಿಜನರೊಡನೆ ತೆಂಕಣ ।
ಕಡೆಯ ಕನ್ನಡ ಮಂಗಳೂರಿನ ಮಾರ್ಗ ಸಂಚರಿಸಿ ॥
ಸಡಗರದೆ ಧೀರೇಂದ್ರಯತಿವರ । ರೊಡೆಯರಾರಾಧನೆಯತಾವೇ ।
ನಡೆಯಿಸಲು ಸೇರಿದರು ರಿತ್ತಿಯಕ್ಷೇತ್ರವನು ನಲಿದು ॥ ॥೯೯॥

ತಾತ್ಪರ್ಯ : ನಂತರ ಶ್ರೀಕೃಷ್ಣನ ಪ್ಪಣೆ ಪಡೆದು, ಪರಿವಾರದೊಂದಿಗೆ ದಕ್ಷಿಣದ ಮಂಗಳೂರಿನ ಮಾರ್ಗವಾಗಿ ಸಂಚರಿಸುತ್ತಾ, ಶ್ರೀಧೀರೇಂದ್ರತೀರ್ಥರ ಆರಾಧನೆಯನ್ನು ತಾವೇ ನಡೆಯಿಸಲು ನಿಶ್ಚಯಿಸಿ ರಿತ್ತಿ ಕ್ಷೇತ್ರವನ್ನು ಬಂದು ಸೇರಿದರು.

ಸಮನಿಸಿತು ನವವರ್ಷಮಕ್ಷಯ । ಮಮಲಗುರುಗಳ ತನುವಿಗಲಸಿಕೆ ।
ಸಮನಿಸಿತು ಗರಪುರದ ಸ್ವಕ್ಷಯಗಮನವನು ನಿಲಿಸಿ ॥
ವಿಮಲಮಂತ್ರಾಲಯಕೆ ಪೋಗುವ । ಭ್ರಮಣೆಚಿತ್ತದೊಳಿರ್ದ್ದುದಾದೊಡ ।
ಮಮಿತದೇಹಾಯಾಸಕಾರಣ ನಿಲಿಸಿದರು ಗತಿಯ ॥ ॥೧೦೦॥

ತಾತ್ಪರ್ಯ : ನವವರ್ಷ ಅಕ್ಷಯ ಸಂವತ್ಸರವು ಬಂದಿತು. ಆ ಸಮಯದಲ್ಲಿ ಶ್ರೀಗುರುಗಳಿಗೆ ಸ್ವಲ್ಪ ದೇಹಾಲಸ್ಯ ಉಂಟಾಯ್ತು. ಮೊದಲು ನಂಜನಗೂಡಿಗೆ ಹೋಗಬೇಕೆಂದು ನಿಶ್ಚಯಿಸಿದರು. ನಂತರ ಮನಸ್ಸು ಬದಲಿಸಿ ಮಂತ್ರಾಲಯಕ್ಕೆ ಹೋಗಬೇಕೆಂದು ನಿರ್ಧರಿಸಿದರು. ಆದರೆ ದೇಹಾಲಸ್ಯದಿಂದ ಅದನ್ನೂ ನಿಲ್ಲಿಸಿದರು.

Rarest Archiver

ಅಲ್ಲಿ ಶ್ರೀಧೀರೇಂದ್ರಸಂನಿಧಿ । ಯಲ್ಲಿ ಚೈತ್ರದ ರಾಮನವಮಿಯು ।
ಸಲ್ಲಲಿತವೈಭವದೆ ನಡೆದುದು ಪೂರ್ವಸರಣಿಯಲಿ ॥
ಪಲ್ಲಟಿತಮಾನಸರು ಗುರುವರ । ರಲ್ಲಿರದೆ ಶಿಷ್ಯಾರ್ಜನೆಗೆ ಹು ।
ಬ್ಬಳ್ಳಿಯನು ಸೇರಿದರು ದಿನದಿನ ಕುಂದಿತಾರೋಗ್ಯ ॥ ॥೧೦೧॥

ತಾತ್ಪರ್ಯ : ಆ ವರ್ಷದ ಶ್ರೀರಾಮನವಮಿ ಅಭಿಷೇಕ ಪೂಜೆಗಳು ಶ್ರೀಧೀರೇಂದ್ರತೀರ್ಥರ ಸನ್ನಿಧಿಯಲ್ಲಿ ರಿತ್ತಿ ಕ್ಷೇತ್ರದಲ್ಲೇ ನಡೆದವು. ನಂತರ ಗುರುಗಳು ಕೆಲವು ದಿನ ಹುಬ್ಬಳ್ಳಿಯಲ್ಲಿ ನಿಂತರು. ಈ ನಡುವೆ ಅವರ ಆರೋಗ್ಯ ದಿನದಿನಕ್ಕೂ ಕುಂದಿತು.

ಆಗ ಗುರುಗಳಮನವು ಚಂಚಲ । ಮಾಗಿ ಮಂತ್ರಾಲಯಕೆ ಸೇರಲು ।
ಸಾಗದಿದ್ದಾರಾಮಭಕ್ತಿಧ್ಯಾನದಿಂದಿರಲು ॥
ರಾಘವೇಂದ್ರಸ್ವಾಮಿ ಕರುಣಾ । ಸಾಗರರು ಮೈದೋರಿಮನದಲಿ ।
ಜಾಗರತೆ ಗೊಳಿಸಿದರು ರಾಮಾಯಣದ ಸಂಗತಿಯ ॥ ॥೧೦೨॥

ತಾತ್ಪರ್ಯ : ಮತ್ತೆ ಅವರ ಮನಸ್ಸು ಬದಲಾಗಿ ಮಂತ್ರಾಲಯಕ್ಕೆ ಹೊರಡಲು ಅನುವಾದರು. ಆದರೆ ಹೋಗಲಾರದೆ ಶ್ರೀರಾಮಭಕ್ತಿಯಿಂದ ಧ್ಯಾನಪರರಾದರು. ಕರುಣಾಸಾಗರರಾದ ಶ್ರೀರಾಘವೇಂದ್ರರು ಅವರಿಗೆ ಮುಂದಿನ ದಾರಿಯನ್ನು ಪ್ರೇರಣೆ ಮಾಡಿದರು.

ರಾಮನೇ ದಶರಥನು ಭೂಮಿಜೆ । ಪ್ರೇಮಜನನಿಯು ನಿನಗಯೋಧ್ಯಾ ।
ಸೀಮೆ ವನವೇ ಎಂದು ಮಾಗಧಿಮಗನಿಗೊರೆದವೊಲು ॥
ಸ್ವಾಮಿಗುರುಧೀರೇಂದ್ರರೇ ರಘು । ರಾಮರಿತ್ತಿಯಕ್ಷೇತ್ರ ಸೀತೆಯು ।
ವಾಮವರದಾತೀರ ಮಂತ್ರಾಲಯವು ಸಮನಿಸಿತು ॥ ॥೧೦೩॥

ತಾತ್ಪರ್ಯ : ರಾಮಾಯಣದಲ್ಲಿ ಸುಮಿತ್ರೆಯು ಲಕ್ಷ್ಮಣನಿಗೆ "ರಾಮನೇ ನಿನಗೆ ತಂದೆ ದಶರಥನು, ಸೀತೆಯೇ ತಾಯಿ, ವನವೇ ಅಯೋಧ್ಯೆ" ಎಂದು ಉಪದೇಶಿಸಿದಂತೆ "ಶ್ರೀಧೀರೇಂದ್ರರೇ ರಾಮದೇವರು, ರಿತ್ತಿಯ ಕ್ಷೇತ್ರವೇ ಸೀತಾದೇವಿಯು, ವರದಾ ನದೀತೀರವೇ ಮಂತ್ರಾಲಯವು" ಎಂದು ಬಾವಿಸುವಂತೆ ಪ್ರೇರೇಪಿಸಿದರು.

Rarest Archiver

ಕೊನೆಗೆ ರಿತ್ತಿಯ ಕ್ಷೇತ್ರದಲಿ ಗುರು । ತನುವಿನಾಮಯ ಬಲಿತು ವೈದ್ಯರ ।
ಘನತೆಯಿಂದವರಾಶ್ರಮಾಚರಣಗಳು ಸಮನಿತ್ತು ॥
ದಿನದಿನಕೆ ನಾನಾದಿಗಂತದ । ಜನರು ಬೇಗನೆ ಬಂದು ಗುರುಗಳ ।
ತನುಮನಸ್ಸ್ಥಿತಿಯಂ ನಿರೀಕ್ಷಿಸುತಿರ್ದ್ದರವಸರದೆ ॥ ॥೧೦೪॥

ತಾತ್ಪರ್ಯ : (ಶ್ರೀಧೀರೇಂದ್ರರೇ ರಾಮದೇವರು, ವರದಾ ನದಿಯೇ ಸೀತೆ, ರಿತ್ತಿ ಕ್ಷೇತ್ರವೇ ಮಂತ್ರಾಲಯ ಎಂದು ಅರ್ಥ ಮಾಡಬಹುದೇ? ನೋಡಬೇಕು - ಯಾವುದು ಉಚಿತವೋ ಎಂಬುದನ್ನು ನಿರ್ಧರಿಸುವುದು) ಹೀಗಿರುವಾಗ ಗುರುಗಳ ದೇಹಾಲಸ್ಯವು ಹೆಚ್ಚಾಗಿ ವೈದ್ಯರು ತಮ್ಮ ಕೈಲಾದಷ್ಟು ಔಷಧೋಪಚಾರ ಮಾಡುತ್ತಿದ್ದರು. ನಾನಾ ಕಡೆಗಳಿಂದ ಜನರು ಬೇಗ ಬೇಗ ಬಂದು ಗುರುಗಳ ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿದ್ದರು.

ಶ್ರೀನಿವಾಸಾಚಾರ್ಯರೇ ಗುರು । ಸೂನುವಾಗಿಯು ಮಲ್ಲದೆಯೆ ಧೀ ।
ಮಾನಪದವಿಯೊಳಿರ್ದ್ದು ಮಠದಲಿ ಕಾರುಬಾರಗಳ ॥
ಮಾನಮರ್ಯಾದಾವಿಚಕ್ಷಣೆ । ಗೂನಮಿಲ್ಲದೆ ನಿರ್ವಹಿಸಿ ಸು ।
ಜ್ಞಾನದಿಂದಂ ಭಾವಿಗುರುಪದಕರ್ಹರೆನಿಸಿದರು ॥ ॥೧೦೫॥

ತಾತ್ಪರ್ಯ : ಶ್ರೀಪಾದ ಪುತ್ರರಾದ, ಶ್ರೀಮಠದ ದಿವಾನರಾದ ಶ್ರೀನಿವಾಸಮೂರ್ತಾಚಾರ್ಯರೇ (ಶ್ರೀಸುಕೃತೀಂದ್ರರ ಪೂರ್ವಾಶ್ರಮದ ಮಕ್ಕಳು) ಮಠದ ಕಲಾಪಗಳನ್ನು ನಡೆಸುತ್ತಿದ್ದರು. ಮುಂದೆ ಗುರುಪದವಿಗೆ ಅರ್ಹರೆನಿಸಿದರು.

ಹರಿಯ ಪ್ರೇರಣೆಯಂ ಸುಶೀಲರು । ಬರೆಸಿದರು ಪತ್ರಿಕೆಯ ಬೇಗನೆ ।
ಬರುವವೊಲು ಶ್ರೀದುರ್ಗ ಕೃಷ್ಣಾಚಾರ್ಯ ಬಂಧುವಿಗೆ ॥
ಗುರುಸುತರುಮಲ್ಲದೆ ದಿವಾನರು । ಮರಿಯದಿರ್ದ್ದರು ನಿಜರಹಸ್ಯ ।
ನೆರೆಯುತಿರ್ದ್ದರು ಜನರು ಪೂರ್ವಾಶ್ರಯದ ಬಂಧುಗಳು ॥ ॥೧೦೬॥

ತಾತ್ಪರ್ಯ : ಶ್ರೀಹರಿ ಪ್ರೇರಣೆಯಂತೆ ಶ್ರೀಗುರುಗಳು ಪೂರ್ವಾಶ್ರಮದ ಬಂಧುಗಳಾದ ದುರ್ಗದ ಶ್ರೀಕೃಷ್ಣಾಚಾರ್ಯರಿಗೆ ಪತ್ರವನ್ನು ಬರೆಸಿ ಶೀಘ್ರವಾಗಿ ರಿತ್ತಿಗೆ ಬರುವಂತೆ ತಿಳಿಸಿದರು.

Rarest Archiver

ಬಂದ ಶಿಷ್ಯ ಗೃಹಸ್ಥಜನರಿಗೆ । ಬಂಧುವರ್ಗಕೆ ಸಹಿತ ವಾಸದ ।
ಮಂದಿರಗಣಿಯಾಗಿ ಕಾಲಕೆ ತೀರ್ಥಭೋಜನಗಳ್ ॥
ಸಂದು ಗುರುಗಳ ಪಥ್ಯದೊಂದಿಗೆ । ಮುಂದಿನೇರ್ಪಾಡುಗಳು ಮೆಚ್ಚರ ।
ದಿಂದ ನಡೆದುವು ಬಹುಸಮರ್ಥ ದಿವಾನರಾಣತಿಯಂ ॥ ॥೧೦೭॥

ತಾತ್ಪರ್ಯ : ಬಂದು ಸೇರಿದ ಜನಗಳಿಗೆ ಇಳಿದುಕೊಳ್ಳಲು ಮನೆಗಳನ್ನೂ, ಅವರ ತೀರ್ಥ ಪ್ರಸಾದ ಭೋಜನಗಳಿಗೂ ಮತ್ತು ಮುಂದೆ ಕೈಗೊಳ್ಳಬೇಕಾದ ಕಾರ್ಯಗಳನ್ನು ಸಮರ್ಥರಾದ ದಿವಾನರು ಏರ್ಪಾಡು ಮಾಡಿದರು.

ಈತರನುತಜ್ಯೇಷ್ಠಮಾಸಾ । ಶ್ವೇತನವಮಿಯ ವರೆಗೆ ಜರಿಗಿತು ।
ಪೂತಗುರುಗಳು ತದ್ದಿವಸ ಧೀರೇಂದ್ರಗುರುವರರ ॥
ಪೂತಬೃಂದಾವನಸಮೀಪದೊ । ಳ್ಕೈತರುತಮೀದಿನದೆ ಗುರುಪದ ।
ಪಾಥವೇ ಸಾಕೆಂದು ನಿರಶನನಿಯಮ ಕೈಕೊಂಡರ್ ॥ ॥೧೦೮॥

ತಾತ್ಪರ್ಯ : ಈ ರೀತಿಯಾಗಿ ನಡೆಯುತ್ತಾ, ಜೇಷ್ಠಮಾಸದ ಶುದ್ಧನವಮಿಯ ದಿನದಿಂದ ಗುರುಗಳು ಶ್ರೀಧೀರೇಂದ್ರತೀರ್ಥರ ಬೃಂದಾವನದ ಬಳಿ ಕೂತು ಧ್ಯಾನಪರರಾಗಿ ನಿರಶನವ್ರತವನ್ನು ಕೈಕೊಂಡರು.

ಆವಗಂ ವೀರಾಸನದೊಳ । ನ್ಯಾವಲೋಕನ ಭಾಷೆಯಿಲ್ಲದೆ ।
ಪಾವನದ ಬೃಂದಾವನದ ಬಲಿಯಂತರಾನನದೆ ॥
ದೇವದೇವನಭಾವಿಸುತ್ತಿಹ । ಶ್ರೀವಪುಷ್ಯಸುಶೀಲಗುರುವರ ।
ರಾವನರನುಂ ನೋಡಿ ಪರಮಾಶ್ಚರ್ಯಪಡಲೊಲ್ಲಂ ॥ ॥೧೦೯॥

ಈ ಪರಿಯೊಳಿರ್ಪ್ಪೂರುದಿನಗಳ । ಯಾಪನೆಯನಂತರದೆ ।
ಶ್ರೀಪದಗ ವಿಜಯೀಂದ್ರತೀರ್ಥರ ಪುಣ್ಯದಿವಸವದು ॥
ಆಪನಿತು ಸಂಭ್ರಮದೆ ಜರಿಗಿತು । ಶ್ರೀಪತಿಯ ಧ್ಯಾನದಲಿ ಗುರುಗಳು ।
ವೈಪರೀತ್ಯವಿದಿಂದಿಗೆಲ್ಲವು ಬಗೆಹರಿಯಿತೆಂದರ್ ॥ ॥೧೧೦॥

Rarest Archiver

ಶುಚಿಯ ಶುಕ್ಲ ಪ್ರಥಮದಿನದೊಳು । ಸಚಿವರೊಡನಾಗುರುವರೇಣ್ಯರು ।
ವಚಿಸುತಾಪ್ತಾಲೋಚನೆಯ ಸಂತೈಸಿದರು ಮತ್ತೆ ॥
ಉಚಿತರೀತ್ಯಾ ಶಿಷ್ಯವರ್ಗದ । ವಚಿಸಿ ನಿಮ್ಮದೆ ಮಠದ ಋಣನಿ ।
ರ್ವಚನಗೆಯ್ವುದು ಎಂದು ವಿನಯವ ಸೂಚಿಸಿದರಂದು ॥ ॥೧೧೧॥

ಬಳಿಕ ತಮ್ಮಾಜ್ಞೆಯಲಿ ಬಂದಿಹ । ಚೆಲುವಕೃಷ್ಣಾಚಾರ್ಯರಂ ಬರ ।
ಸೆಳೆದು ಪೇಳಿದರೆಮಗೆ ಕಾಲವು ಪರಿಸಮೀಪಿಸಿತು ॥
ಸುಲಭವಾಗಿದೆ ನಿನಗೆ ಸಾಧನ । ಕಲನಸಮಯವು ನಾವು ನಿನಗೀ ।
ಫಲವನೀವೆವು ನಮ್ಮ ಪೀಠಾರೋಹಣಕೆ ಎನುತ ॥ ॥೧೧೨॥

ತಾತ್ಪರ್ಯ : ಆ ಹೊತ್ತಿಗೆ ಶ್ರೀವಿಜಯೀಂದ್ರತೀರ್ಥರ ಆರಾಧನೆಯು ಬಂದೊದಗಿತು. ಶ್ರೀಯವರು ಉತ್ಸಾಹದಿಂದ ಕೂಡಿ ವೈಭವದಿಂದ ವಿಜಯೀಂದ್ರರ ಆರಾಧನೆಯನ್ನು ನಡೆಸಿದರು.

ಆರಾಧನೆಯ ನಂತರ ಶ್ರೀಗಳು, ಮಠದ ದಿವಾನರು ಮತ್ತು ಕೆಲವು ಆಪ್ತರೊಡನೆ ಆಲೋಚಿಸಿ ಮುಂದಿನ ಕ್ರಮವನ್ನು ನಿರ್ಧರಿಸಿದರು. ತಮ್ಮ ಪತ್ರದ ಆದೇಶದಂತೆ ಆಗಮಿಸಿದ್ದ ಶ್ರೀಕೃಷ್ಣಾಚಾರ್ಯರನ್ನು ಕರೆದು, “ನಮ್ಮ ಕಾಲವು ಮುಗಿಯುತ್ತಾ ಬಂದಿದೆ. ನಿಮಗೆ ಸಾಧನೆಗೆ ಒಳ್ಳೆಯ ಅವಕಾಶ ಒದಗಿದೆ. ನಿಮ್ಮನ್ನು ಪೀಠಕ್ಕೆ ಮುಂದಿನ ಗುರುಗಳನ್ನಾಗಿ ಆಯ್ಕೆ ಮಾಡಿದ್ದೇವೆ. ಈಗ ಫಲವನ್ನು ಸ್ವೀಕರಿಸುವುದು” ಎಂದರು.

“ಕನಸುಮನಸಿನೊಳಿದನರಿಯದಿಹ । ವಿನಯ ಕೃಷ್ಣಾಚಾರ್ಯರನರ ।
ಘನತೆಯಿಚ್ಛಿಪುದೇನು ಧರ್ಮವು” ಎಂದು ಮೌನಮಿರೆ ॥
“ನಿನಗೆ ಗುರುಪದ ಕೊಡುವಕಾರಣ । ಮೆನಿತೊ ಇರುವುವು ಫಲವ ಸ್ವೀಕರಿ ।
ಸೆ” ನುತ ಗುರುವಚವಾಗಲದ ಕೈಕೊಂಡರಾಚಾರ್ಯರ್ ॥ ॥೧೧೩॥

ತಾತ್ಪರ್ಯ : ಶ್ರೀಕೃಷ್ಣಾಚಾರ್ಯರು ಕನಸು-ಮನಸಿನಲ್ಲಿಯೂ ಎಂದೂ ತಮಗೆ ಆಶ್ರಮವಾಗುವುದೆಂದು ನೆನಸಿರಲಿಲ್ಲ. ಆದ್ದರಿಂದ ಮೌನವಾಗಿ ನಿಂತಿದ್ದರು. ಅದಕ್ಕೆ ಗುರುಗಳು “ನಿಮಗೆ ಗುರುಪದವ ಕೊಡುವ ಕಾರಣಗಳು ಅನೇಕವಿವೆ. ಈಗ ಈ ಫಲವನ್ನು ಸ್ವೀಕರಿಸು” ಎನ್ನಲು, ಕೃಷ್ಣಾಚಾರ್ಯರು ಅವರ ಆಜ್ಞೆಯನ್ನು ಶಿರಸಾವಹಿಸಿದರು.

Rarest Archiver

ಬಳಿಕ ವಿಧಿವತ್ತಾದ ಕರ್ಮಗ । ಳುಳಿಯದೆಲ್ಲವು ನಡೆದು ವರದೆಯ ।
ಹೊಳೆಗೆ ಕೃಷ್ಣಾಚಾರ್ಯರಂ ಸಂಭ್ರಮದೆ ಕರೆದುಯ್ದು ॥
ಜಳಕಮಾಡಿಸಿ ಕಹಳೆವಾಲಗ । ಕುಲದ ವಾದ್ಯವಿಶೇಷದಿಂ ಮಠ ।
ನಿಲಯದಲ್ಲಿಗೆ ಕರೆದುತಂದರು ಗುರುಗಳಾಜ್ಞೆಯಲಿ ॥ ॥೧೧೪॥

ತಾತ್ಪರ್ಯ : ಮರುದಿವಸ ವರದಾ ನದೀತೀರದಲ್ಲಿ ಎಲ್ಲ ಕಾರ್ಯಗಳು ವಿಧಿವತ್ತಾಗಿ ನಡೆದವು. ಕೃಷ್ಣಾಚಾರ್ಯರು ನದಿಯಲ್ಲಿ ಮಿಂದು, ಕೊಂಬು, ಕಹಳೆ, ವಾಲಗ, ಪರಿವಾರ ಸಮೇತ ಶ್ರೀಮಠಕ್ಕೆ ಬಂದರು.

ಕೂಡೆ ಪಂಚಾಮೃತದ ಸೇಚನ । ಮಾಡಿ ಕೃಷ್ಣಾಚಾರ್ಯರಿಗೆ ನೆರೆ ।
ಬಾಡಬರಮುಖದಿಂ ಸುದರ್ಶನಹೋಮವದು ನಡೆದು ॥
ಸೋಢಮುದ್ರಾಧಾರಣೆಯ । ನಾರೂಢಗುರುಗಳ ಹಸ್ತದಿಂದಂ ।
ಮಾಡಿಸಿದರಾಮಠದ ವೈದಿಕಸಭ್ಯಜನರೊಲಿದು ॥ ॥೧೧೫॥

ತಾತ್ಪರ್ಯ : ಆ ದಿನ ಮಠದಲ್ಲಿ ಸುದರ್ಶನ ಹೋಮವು ನಡೆಯಿತು.

ಸಮಿತಿನೆರೆದು ಲೌಕಿಕರದೇ । ಶಮುಖಿ ಶಾಂರಾವ್ ಮೊದಲು ರಿತ್ತಿಯ ।
ಪ್ರಮುಖಜನರಧಿಕಾರಿಗಳು ಕುಲಕರ್ಣಿಗಳು ಸಹಿತ ॥
ಸಮಯದಲಿ ಬಹುಸುವ್ರತಂಗಳ । ಸಮೆದು ಪೀಠವ ಪಡೆನೂತನ ।
ಯಮಿವರರು ಶ್ರೀಸುವ್ರತೀಂದ್ರ ಸುತೀರ್ಥರೆನಿಸಿದರು ॥ ॥೧೧೬॥

ತಾತ್ಪರ್ಯ : ರಿತ್ತಿಯ ಪುರ ಪ್ರಮುಖರಾದ ದೇಶಮುಖ್ ಶ್ಯಾಮರಾವ್ ಅವರ ನೇತೃತ್ವದಲ್ಲಿ ನೂತನ ಯತಿಗಳ ಪಟ್ಟಾಭಿಷೇಕವನ್ನು ಅನೇಕ ಪುರಪ್ರಮುಖರ ಸಮ್ಮುಖದಲ್ಲಿ ನೆರವೇರಿಸಲಾಯಿತು. ಅನೇಕ ಸುವ್ರತಗಳನ್ನು ಮಾಡಿ ಪೀಠವನ್ನು ಅಲಂಕರಿಸಿದ ಯತಿಗಳಿಗೆ, 'ಸುವ್ರತೀಂದ್ರತೀರ್ಥರು' ಎಂದು ನಾಮಕರಣವಾಯ್ತು.

Rarest Archiver

ನವ್ಯಗುರುಪೀಠಾಧಿರೋಹಣ । ಸುವ್ಯವಸ್ಥಾಸಂಗತಿಯ ಸಂ ।
ಭಾವ್ಯಮಾನ ಮಹೀಸುರಾಧಿಪ ಕೃಷ್ಣರಾಜರಿಗೆ ॥
ಭವ್ಯತಾರಾಯಂತ್ರಮುಖದಿಂ । ಶ್ರಾವ್ಯಗೊಳಿಸಿದರೂರಿನಲಿ ಸಂ ।
ಸೇವ್ಯಮಾನ ಗುರೂತ್ಸವವು ಪರಿಶೋಭಿಸಿತು ಕಣ್ಗೆ ॥ ॥೧೧೭॥

ತಾತ್ಪರ್ಯ : ನೂತನ ಯತಿಗಳಿಂದ ಎಲ್ಲರಿಗೂ ಮುದ್ರಾಧಾರಣೆ ನಡೆಯಿತು. ನೂತನ ಗುರುಗಳ ಪೀಠಾರೋಹಣದ ವಾರ್ತೆಯನ್ನು ಮೈಸೂರು ಮಹಾರಾಜರಾದ ಶ್ರೀಕೃಷ್ಣರಾಜ ಒಡೆಯರಿಗೆ ತಂತೀ ಮೂಲಕ ತಿಳಿಸಲಾಯ್ತು. ನಂಜನಗೂಡಿನಲ್ಲಿಯೂ ಈ ಉತ್ಸವವನ್ನು ಸಂಭ್ರಮದಿಂದ ಆಚರಿಸಲಾಯ್ತು.

ಶಾಲಿವಾಹನಶಕ ಗತದ ದಿ । ಕ್ಪಾಲವರ್ಗೈಶ್ವರ್ಯ ಧರಣೀ ।
ಲೋಲ ಸಂಖ್ಯಾಕ್ಷಯದ ಶುಚಿಸಿತ ಪಕ್ಷ ತದಿಗೆಯಲಿ ॥
ಮೂಲರಾಮರ ಪ್ರಥಮಪೂಜೆಯ । ನೋಲಗಿಸಿದರು ರಾಘವೇಂದ್ರ ಸು ।
ಶೀಲಗುರುಕರಜಾತ ಸುವ್ರತತೀರ್ಥಯತಿವರರು ॥ ॥೧೧೮॥

ತಾತ್ಪರ್ಯ : ಶಾಲಿವಾಹನ ಶಕ ಅಕ್ಷಯ ಸಂವತ್ಸರದ ಆಷಾಢ ಶುದ್ಧ ತದಿಗೆಯ ದಿನ ಶ್ರೀಸುವ್ರತೀಂದ್ರರು ಸಂಸ್ಥಾನದ ಮೂಲರಾಮರೇ ಮೊದಲಾದ ದೇವರ ಪ್ರತಿಮೆಗಳ ಪ್ರಥಮಪೂಜೆಯನ್ನು ಮಾಡಿದರು.

ಬಳಿಕ ಮುಂದಣ ತಮ್ಮ ಚರ್ಯೆಯ । ತಿಳಿಯಲೋಸುಗ ಗುರುಸುಶೀಲರ ।
ಬಳಿಗೆ ಶ್ರೀತಾತ್ಪರ್ಯನಿರ್ಣಯಪುಸ್ತವಂ ತರಿಸಿ ॥
ಎಲೆಗಳನು ಗುರುವಿನಲಿ ಯಾಚಿಸೆ । ಸಲುವ ಗೋಬ್ರಾಹ್ಮಣರ ಧರ್ಮವ ।
ಸಲಹುವುದೆ ಕರ್ತವ್ಯವೆಂಬಾಪತ್ರದೊರೆದುದಲಾ ॥ ॥೧೧೯॥

ತಾತ್ಪರ್ಯ : ಶ್ರೀಸುಶೀಲೇಂದ್ರರು ಶಿಷ್ಯರಿಗೆ ಉಪದೇಶ ಮಾಡಿ ಗೋ, ಬ್ರಾಹ್ಮಣರ ಮತ್ತು ಧರ್ಮವನ್ನು ಸಲಹುವುದೇ ಅವರ ಕರ್ತವ್ಯವೆಂದು ತಿಳಿಸಿದರು.

Rarest Archiver

ಹರಿಯನುಗ್ರಹದಿಂದ ನೂತನ । ಗುರುಗಳಾಹರಿತೀರ್ಥಮಂ ನಿಜ ।
ಕರದಿನಿತ್ತರು ಸಫಲಮಂತ್ರಾಕ್ಷತೆಯ ಸರ್ವರಿಗೆ ॥
ಇರಳು ಕಳೆಯುತ್ತಿರೆ ಸುಶೀಲರು । ಪರಮಪದವಿಯ ಕುರಿತು ಪಯಣವ ।
ತೆರಳಿದರು ಪಂಡಿತರು ಭಗವತ್ಸ್ತೋತ್ರಮಾಡುತಿರೆ ॥ ॥೧೨೦॥

ತಾತ್ಪರ್ಯ : ನೂತನ ಯತಿಗಳು ಎಲ್ಲರಿಗೂ ತೀರ್ಥವನ್ನೂ, ಫಲಮಂತ್ರಾಕ್ಷತೆಗಳನ್ನು ಕೊಟ್ಟು ಕಳಿಸಿದರು. ಆ ದಿನ ರಾತ್ರಿಯಾಗುತ್ತಿರಲು, ಮಠದ ಪಂಡಿತರೂ, ಶಿಷ್ಯರೂ ಭಗವಂತನ ಸ್ತೋತ್ರ ಮಾಡುತ್ತಿದ್ದರು.

ಒಡನೆ ಚರಮಶ್ಲೋಕಪಠನಗ । ಳೊಡನೆ ಬೃಂದಾವನದ ರಚನೆಯು ।
ಮೊಡನೆ ನೂತನಗುರುಗಳಿಂ ಶ್ರೀರಾಮಚಂದ್ರಮನ ॥
ಅಡಿಯಬುಜಪೂಜಾವಿಧಾನವು । ನಡೆದು ಭೂಸುರ ಭೂರಿಭೋಜನ ।
ಸಡಗರಿಸಿ ತೆರಡುದಿನ ಪಂಡಿತಬಹುಮತಿಗಳೊಡನೆ ॥ ॥೧೨೧॥

ತಾತ್ಪರ್ಯ : ಶ್ರೀಸುಶೀಲೇಂದ್ರತೀರ್ಥರು ಪರಮಪದವಿಯನ್ನು ಕುರಿತು ಪಯಣಿಸಿದರು. ಒಡನೆ ಶ್ರೀಸುಶೀಲೇಂದ್ರತೀರ್ಥರಿಗೆ ಬೃಂದಾವನವು ಸಿದ್ಧವಾಯ್ತು. ನೂತನ ಗುರುಗಳು ತಮ್ಮ ಗುರುಗಳ ಮೇಲಿನ ಚರಮಶ್ಲೋಕವನ್ನು ಪಠಿಸಿದರು. ನಂತರ ಎರಡು ದಿನಗಳ ಕಾಲ ಶ್ರೀಮೂಲರಾಮಚಂದ್ರನೇ ಮೊದಲಾದ ಸಂಸ್ಥಾನದ ಪೂಜೆಗಳು ಮತ್ತು ಭೂರಿಭೋಜನಗಳು ನಡೆದವು.

ಇನಿತು ಸಾಹಸಕಾರ್ಯವೆಲ್ಲವ । ವಿನಯದಿಂ ನೆರವೇರಿಸಿದ ಸ ।
ದ್ಗುಣವಿಭೂಷ ಶ್ರೀನಿವಾಸಾಚಾರ್ಯ ಮೂರ್ತಿಗಳು ॥
ಎನಿತು ಧನ್ಯರೊ ಮಾನ್ಯರೋ ಎಂ । ದೆನುತ ಕೊಂಡಾಡುತ್ತೆ ಜನರವ ।
ರನುಮತಿಯ ಪಡೆಯುತ್ತೆ ಸೇರ್ದರು ತಮ್ಮ ನಿಲಯಗಳ ॥ ॥೧೨೨॥

ತಾತ್ಪರ್ಯ : ಈ ಎಲ್ಲ ಕಾರ್ಯಗಳನ್ನು ಎಷ್ಟು ಸಾಹಸದಿಂದ, ವಿನಯದಿಂದ ಸದ್ಗುಣ ವಿಭೂಷಣ ಶ್ರೀನಿವಾಸಮೂರ್ತಾಚಾರ್ಯರು ನಡೆಸಿದರೋ, ಅವರೇ ಧನ್ಯರೂ ಮಾನ್ಯರೂ ಎನ್ನುತ್ತ ಅಲ್ಲಿದ್ದ ಜನರೆಲ್ಲಾ ತಮ್ಮ ತಮ್ಮ ಮನೆಗೆ ತೆರಳಿದರು.

Rarest Archiver

ಅಂದು ನವಗುರು ಸುವ್ರತೀಂದ್ರರು । ಹಿಂದಣಿಂ ಶ್ರೀಮನ್ತಪದದೊಳೆ ।
ಸಂದಗುರುಸುತ ಶ್ರೀನಿವಾಸಾಚಾರ್ಯರೊಡನೆಂದರ್ ॥
"ಇಂದಿರಾಪತಿ ನಿಮ್ಮನೊಲಿದಿಹ । ನಿಂದು ನೀವೇ ಪರಮಧನ್ಯರು ।
ಮುಂದೆಯುಂ ಶ್ರೀಮಠದ ರಕ್ಷಣೆ ನಿಮ್ಮದೇ" ಎನುತ ॥ ॥೧೨೩॥

ತಾತ್ಪರ್ಯ : ಶ್ರೀಸುವ್ರತೀಂದ್ರತೀರ್ಥರು "ಇಂದಿರಾಪತಿ ನಿಮಗೆ ಒಲಿದಿದ್ದಾನೆ. ನೀವೇ ಪರಮಧನ್ಯರು ಮತ್ತು ಮುಂದೆ ನೀವೇ ಮಠದ ರಕ್ಷಕರೂ ಆಗಿದ್ದೀರಿ" ಎಂದು ಶ್ರೀನಿವಾಸಮೂರ್ತಾಚಾರ್ಯರಿಗೆ ಹೇಳಿದರು.

ಮುಂದೆ ಮಠದ ದಿವಾನರಂ ತದ । ನಂತರದೊಳಿತರ ಪ್ರಮುಖರನು ।
ಸಂತಸಭ್ಯಗೃಹಸ್ಥಶಿಷ್ಯರ ವಿನಯಮಾದರಿಸಿ ॥
ಇಂತು ಕೆಲದಿನಕಳೆದು ರಿತ್ತಿಯ । ಪ್ರಾಂತದಿಂ ಪೊರಮಟ್ಟು ಪಾವನ ।
ಮಂತ್ರದಾಲಯ ಸೇರಿದರು ಸಾಮಾತ್ಯ ಗುರುವರರು ॥ ॥೧೨೪॥

ತಾತ್ಪರ್ಯ : ಮುಂದೆ ಕೆಲವು ದಿನಗಳು ಅಲ್ಲೇ ಕಳೆದು, ನಂತರ ಎಲ್ಲರನ್ನೂ ಅವರವರ ಊರುಗಳಿಗೆ ಫಲಮಂತ್ರಾಕ್ಷತೆಯನ್ನು ಕೊಟ್ಟು ಕಳುಹಿಸಿದರು. ನಂತರ ಶ್ರೀಗಳು ರಿತ್ತಿಯಿಂದ ಹೊರಟು ಮಠದ ದಿವಾನರೂ, ಪರಿವಾರದೊಂದಿಗೆ ಮಂತ್ರಾಲಯವನ್ನು ಸೇರಿದರು.

ಗುರುಗಳೀಪರಿ ಮಂತ್ರಣಾಲಯ । ಪರಮಬೃಂದಾವನವ ದರ್ಶಿಸಿ ।
ಹರಿಗುರುಧ್ಯಾನದಲಿ ತತ್ಪರರಾಗಿ ರಂಜಿಪರು ॥
ಪರಮಧೀಮಾನ್ಶ್ರೀನಿವಾಸರು । ಗರಪುರಪ್ರಾಂತ್ಯದಲಿ ಚರಿಸುತೆ ।
ನಿರತರಾಗಿಹರೀ ಮಠದ ಸುಕ್ಷೇಮಯೋಗದಲಿ ॥ ॥೧೨೫॥

ತಾತ್ಪರ್ಯ : ಶ್ರೀಸುವ್ರತೀಂದ್ರರು ಮಂತ್ರಾಲಯವನ್ನು ಸೇರಿ ಶ್ರೀರಾಯರನ್ನು ದರ್ಶಿಸಿ ಶ್ರೀಹರಿಗುರುಧ್ಯಾನದಿಂದಲ್ಲಿಯೇ ಪೂಜಾಪ್ರವಚನ ನಿರತರಾದರು. ಶ್ರೀನಿವಾಸಾಮೂರ್ತಾಚಾರ್ಯರು ನಂಜನಗೂಡಿಗೆ ಬಂದು ನೆಲೆಸಿ ಅಲ್ಲಿಂದಲೇ ಮಠದ ಅಭಿವೃದ್ಧಿ, ಕ್ಷೇಮವನ್ನು ನೋಡಿಕೊಳ್ಳತೊಡಗಿದರು.

Rarest Archiver

ಸಾಂಪ್ರತಂ ಗುರುವರ್ಯರೆನಿಸಿದ । ಕಂಪ್ರಮಾನಸ ರಾಘವೇಂದ್ರಪ ।
ರಂಪರಾಗತ ಗುರುಸುಶೀಲಪ್ರೇರ್ಯ ಸುವ್ರತರು ॥
ಓಂ ಪ್ರತಿಷ್ಠಾತತ್ತ್ವಬೋಧೆಗೆ । ತಾಂ ಪ್ರಯತ್ನಿಸಿ ವೇದಶಾಸ್ತ್ರದ ।
ಸಾಂಪ್ರದಾಯವ ಸಲಹಲೆಂಬುದೆ ಆಸ್ತಿಕಾಭಿಮತಂ ॥ ॥೧೨೬॥

ತಾತ್ಪರ್ಯ : ಮಂತ್ರಾಲಯದಲ್ಲಿ ನೆಲೆಸಿದ ಶ್ರೀಸುವ್ರತೀಂದ್ರರು ಪರಂಪರಾಗತವಾಗಿ ಬಂದಿದ್ದ ಪೂಜಾ-ಪಾಠಪ್ರವಚನ ಮಧ್ವಮತದ ಸಿದ್ಧಾಂತದ ಬೋಧೆ ಮಾಡುತ್ತಾ ಶಿಷ್ಯರಿಗೆ ಪ್ರೀತಿಪಾತ್ರರಾದರು.

ಮಂಗಳಮಕ್ಕೆ ನಮಸ್ತರಾಷ್ಟ್ರ ಜನಗಳ್ಗಾರೋಗ್ಯಭಾಗ್ಯಂಗಳಿಂ ।
ಸಂಗತರಾಗಿ ಮಹೀಶರಾಳಲಿ ಸದಾ ತಂತಮ್ಮ ರಾಜ್ಯಂಗಳಂ ॥
ಕಂಗೊಳಿಸಿರ್ಕೆವನಾಳಿ ಪುಷ್ಪಫಲದಿಂ ಧಾನ್ಯಾದಿಸಂಪತ್ತಿನಿಂ ।
ಭಂಗಗಳಿಲ್ಲದವ್ರೋಲು ಬಾಡಬಜನರ್ಧರ್ಮಂಗಳಂ ರಕ್ಷಿಕೇ ॥ ॥೧೨೭॥

ತಾತ್ಪರ್ಯ : ಸಮಸ್ತ ರಾಷ್ಟ್ರದ ಜನಗಳಿಗೆ ಮಂಗಳವಾಗಲಿ. ಎಲ್ಲರಿಗೂ ಆರೋಗ್ಯಭಾಗ್ಯ ಉಂಟಾಗಲಿ. ಎಲ್ಲ ರಾಜರುಗಳು ತಮ್ಮ ರಾಜ್ಯಗಳನ್ನು ಧರ್ಮದಿಂದ ಆಳುತ್ತಾ ಬರಲಿ, ಎಲ್ಲ ದೇಶಗಳೂ ಧನಧಾನ್ಯದಿಂದ ಸಮೃದ್ಧವಾಗಿರಲಿ. ಪ್ರಜೆಗಳೆಲ್ಲರೂ ಧರ್ಮದಿಂದ, ಸುಖದಿಂದ ಬಾಳಲಿ.

ಭೂಕೈಲಾಸಮೆನಿಪ್ಪ ನಂಜನಗುಡಿಸ್ಥಾನೀಯ ವಿಪ್ರೋತ್ತಮಂ ।
ಶ್ರೀಕಂಠಾತ್ಮಜ ಚಂದ್ರಶೇಖರಸುತಂ ನಂಜುಂಡಸಾಮ್ಯಾಹ್ವಯಂ ॥
ಈ ಕರ್ಣಾಟಕ ಪದ್ಯಕಾವ್ಯವ ನೃಸಿಂಹಾರ್ಯೋಕ್ತಿಯಂ ಭಕ್ತಿಯಂ ।
ಶ್ರೀಕಾನ್ತಾರ್ಪಣಮಾಡಿದಂ ಗುರುವರಶ್ರೀರಾಘವೇಂದ್ರಾಂಘ್ರಿಯೊಳ್ ॥

ತಾತ್ಪರ್ಯ : ಭೂಕೈಲಾಸವೆಂದು ಪ್ರಸಿದ್ಧವಾಗಿರುವ ನಂಜನಗೂಡಿನ ವಿಪ್ರೋತ್ತಮರಾದ ಶ್ರೀಕಂಠರ ಮಗನಾದ ಚಂದ್ರಶೇಖರ ಎಂಬುವರ ಮಗನಾದ ನಂಜುಂಡಸ್ವಾಮಿ ಎಂಬುವವನು ಈ ಕನ್ನಡ ಕಾವ್ಯವನ್ನು ಶ್ರೀನರಸಿಂಹದೇವರ ದಯೆಯಿಂದ, ಭಕ್ತಿಯಿಂದ ರಚಿಸಿ ಶ್ರೀಗುರುರಾಘವೇಂದ್ರರ ಪಾದಗಳಲ್ಲಿ ಶ್ರೀಕಾಂತಾರ್ಪಣ ಮಾಡಿದರು.

Rarest Archiver

ಭಾರತೀಯ ಸಂಸ ತಿಯು ಪ್ರಸ್ಥಾನತ್ರಯಗಳೆಂಬ ಬೇರನ್ನು ಆಶ್ರಯಿಸಿ ನಿಂತಿರುವ ಸನಾತನ ಪ್ರಜ್ಞೆಯುಳ್ಳ ಮಹಾ ವೃಕ್ಷ. ಈ ವೃಕ್ಷವನ್ನು ಆಧರಿಸಿಯೇ ಜಗದ್ವಿಖ್ಯಾತರಾದ ದಾರ್ಶನಿಕರು ತಮ್ಮ ಸಿದ್ಧಾಂತವನ್ನು ಪ್ರಸಾರಗೊಳಿಸುವ ಸಾಹಿತ್ಯಲತೆಯನ್ನು ಹಬ್ಬಿಸಿದ್ದು. ವೇದಾಂತ ಸಾಹಿತ್ಯಕೃಷಿ ಪ್ರಪಂಚದಲ್ಲಿ ಅತ್ಯಂತ ವಿಶಿಷ್ಟವಾದ ಮತ್ತು ವೈಜ್ಞಾನಿಕವಾದ ರೀತಿಯಲ್ಲಿ ಪ್ರಮೇಯಗಳನ್ನು ವಿವರಿಸುವ ಮೂಲಕ ಖ್ಯಾತರಾದವರು ಶ್ರೀಆನಂದತೀರ್ಥರು. ಅರ್ಥವಿವರಣೆಯಲ್ಲಿ ಅತ್ಯಂತ ವಿಸ್ತಾರವಾದ ಹರಹನ್ನು ಹೊಂದಿದ ಆನಂದತೀರ್ಥರ ಈ ಜ್ಞಾನಲತೆಯ ಕುಸುಮಗಳನ್ನು ಆಯ್ದು, ಅದರ ಸೌರಭವನ್ನು ಜನಸಾಮಾನ್ಯರೆಡೆಗೆ ತಂದಿದ್ದು ಶ್ರೀಜಯತೀರ್ಥರು-ಶ್ರೀವಿಜಯೀಂದ್ರತೀರ್ಥರು-ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರಂತಹ ಮಹಾನ್ ಚೇತನರು ಹಾಗು ಶ್ರೀಪುರಂದರ-ಕನಕ-ವಿಜಯದಾಸರಾದಿಯಾದ ಅಸಂಖ್ಯ ಹರಿದಾಸರುಗಳು. ಇದಕ್ಕೆ ಪೂರಕವಾಗಿ ಜಗದ್ಗುರುಗಳ ಮೂಲಸಂಸ್ಥಾನವೇ ಆದ ಶ್ರೀರಾಘವೇಂದ್ರಸ್ವಾಮಿಗಳವರ ಮಠವಂತೂ ಜ್ಞಾನಕೃಷಿಗೆ ಪ್ರಾಚೀನಕಾಲದಿಂದಲೂ ಅವ್ಯಾಹತವಾದ ಪೋಷಣೆ ನೀಡುತ್ತಾ ಬಂದಿದೆ.

ಸರ್ವಜ್ಞಪೀಠದಲ್ಲಿ ಮಂಡಿಸಿ ವೇದಾಂತಪ್ರಪಂಚವನ್ನು ಬೆಳಗಿದ ಶ್ರೀರಘುನಂದನತೀರ್ಥರ 500ನೇ ವರ್ಷದ ಹಾಗೂ ಶ್ರೀರಾಘವೇಂದ್ರಸ್ವಾಮಿಗಳವರ 333ನೇ ಆರಾಧನಾ ಉತ್ಸವದ ಅಂಗವಾಗಿ 2003-2004ನೇ ವರ್ಷವನ್ನು ಶ್ರೀರಘುನಂದನ-ಶ್ರೀರಾಘವೇಂದ್ರವರ್ಷ ಎಂಬುದಾಗಿ ಶ್ರೀಮಠದ ಪ್ರಸ್ತುತ ಪೀಠಾಧಿಪತಿಗಳಾದ 108 ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರು ಘೋಷಿಸಿ ಹಲವಾರು ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಏಕೋತ್ತರಶತಗ್ರಂಥಮಾಲೆಯು ಈ ಕಾರ್ಯಕ್ರಮದ ಪ್ರಮುಖ ಅಂಗ. ದೇಶದೆಲ್ಲೆಡೆ ವಿವಿಧ ಭಾಗಗಳಲ್ಲಿ ಅರಳಿದ್ದ, ಅರಳಿದ್ದರೂ ಜನಮಾನಸಕ್ಕೆ ಗೋಚರವಾಗದೆ ಗುಪ್ತವಾಗುಳಿದಿದ್ದ ಹಲವಾರು ಅಪೂರ್ವ ಗ್ರಂಥಕುಸುಮಗಳನ್ನು ಆಯ್ದು ತಂದು ಈ ಮಾಲೆಯನ್ನು ಪೋಣಿಸಿದೆ. ಸಂಸ ತ, ಕನ್ನಡ, ತೆಲುಗು ಹಾಗೂ ಆಂಗ್ಲಭಾಷೆಯ ಉತ ಷ್ಟ ಕುಸುಮಗಳನ್ನೊಳಗೊಂಡು ಈ ಮಾಲೆಯು ವೈಜಯಂತಿಯೆಂದೇ ನಮ್ಮ ಭಾವನೆ. ಈ ವೈಜಯಂತಿಯ ಒಂದು ಉತ ಷ್ಟಕುಸುಮವೇ ಈಗ ನಿಮ್ಮ ಕರಗ್ರಾಹಿಯಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ, ಈ ಸನಾತನವಾದ ಜ್ಞಾನವೃಕ್ಷವನ್ನು ಅಲುಗಾಡಿಸುವ ಕಿರು ಪ್ರಯತ್ನವನ್ನು ನಾವು ಮಾಡಿದ್ದೇವೆ. ಕೆಳಗೆ ಬಿದ್ದ ಫಲ ಹಾಗು ಪುಷ್ಪಗಳು ಜಿಜ್ಞಾಸುಗಳ ಹೃನ್ಮನೋಮಂದಿರಗಳನ್ನು ಅಲಂಕರಿಸಿದರೆ ಸಾಹಿತ್ಯಕೃಷಿಕರ ಶ್ರಮ ಸಾರ್ಥಕವಾಗಿ ಶ್ರೀಹರಿವಾಯುಗುರುಗಳ ಸಂಪ್ರೀತಿಗೆ ಪಾತ್ರವಾದೀತು.

ರಾಜಾ. ಎಸ್. ರಾಜಗೋಪಾಲಾಚಾರ್ಯ
ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳು